# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XV - 9-10 ಸಪ್ಟೆಂಬರ್ - ಅಕ್ಟೋಬರ್ 1997

### ಈ ಸಂಚಿಕೆಯಲ್ಲಿ


| | | |
|---|---|---|
| ಅಸೋಸಿಯೇಷನ್ನಿನಲ್ಲಿ ಗಣೇಶೋತ್ಸವ | • ರಮಾಕೃಷ್ಣ | 2 |
| ನ್ಯಾಯಪಥ | • ಉಮೇಶ್ ಕುಲಕರ್ಣಿ | 5 |
| ಇದು ನಮ್ಮ ಪ್ರಾಚೀನ ಭಾರತ - 6 | • ಆನಂದ್ ಶಾಸ್ತ್ರಿ | 11 |
| ಸಂಮೋಹಿನಿ ಚಿಕಿತ್ಸೆ - 18 | • ಡಾ। ಉಷಾರಾವ್ | 13 |
| ಸುತ್ತ-ಮುತ್ತ | | 15 |
| Usha Jairam | | 16 |



The Mysore Association, Mumbai

393, Bhaudaji Road, Matunga, Mumbai-400 019.

Tel.: 402 46 47 • Grams: "KARUNADU"

# ಮೈಸೂರು ಅಸೋಸಿಯೇಷನ್ನಿನಲ್ಲಿ ಶ್ರೀಸ್ವರ್ಣ ಗೌರಿ ಮತ್ತು ಶ್ರೀ ಮಹಾಗಣಪತಿಯ ಉತ್ಸವ

● ರಮಾಕೃಷ್ಣ

ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಮೈಸೂರು ಅಸೋಸಿಯೇಷನ್ನಿನಲ್ಲಿ ತಾರೀಕು 5-9-1997ರಂದು ಬೆಳಿಗ್ಗೆ 10ಘಂಟೆಗೆ ಶ್ರೀ ಸ್ವರ್ಣಗೌರಿಯನ್ನು ಪ್ರತಿಷ್ಠಾಪಿಸಿ ಸುವಾಸಿನಿಯರಿಂದ ಪೂಜಿಸಲಾಯಿತು.

ಆದೇ ದಿನ 12ಘಂಟೆಗೆ ಶ್ರೀ ಗಣಪತಿಯನ್ನು ಪ್ರತಿಷ್ಠಾಪಿಸಿ ಪೂಜೆ ಮಹಾ ಮಂಗಳಾರತಿಗಳನ್ನು ಮಾಡಲಾಯಿತು. ತಾ. 6-9-1997ರಿಂದ ವಿವಿಧ ಗಾಯನ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.



ಶ್ರೀಮತಿ ವಿಜಯಲಕ್ಷ್ಮಿ ನಾಥನ್ ಮತ್ತು ಶಿಷ್ಯೆ

ಶನಿವಾರ 6-9-1997ರಂದು 'ಪರಾಶಕ್ತಿ' ತಂಡದವರು. ಶ್ರೀಮತಿ 'ಸರೋಜ ಸುಬ್ರಹ್ಮಣ್ಯರವರ ನೇತೃತ್ವದಲ್ಲಿ ಹಾಡಿದರು. ಶ್ರೀಮತಿ ಸರೋಜ ಸುಬ್ರಹ್ಮಣ್ಯಂರವರು 'ಸ್ವಾತಿತಿರುನಾಳ್ ವಿಶ್ವವಿದ್ಯಾಲಯದ ವಿದ್ಯಾರ್ಥಿನಿ ಇವರಿಗೆ ಇವರ ಗಾಯನವನ್ನು ಮೆಚ್ಚಿ 'ಗಾನ ಕಲಾಭೂಷಣ' ಎಂಬ ಬಿರುದನ್ನು ನೀಡಲಾಗಿದೆ. ಇವರು ತೆಲುಗು, ತಮಿಳು, ಕನ್ನಡ, ಮಲೆಯಾಳಂ ಮತ್ತು ಹಿಂದೀ ಭಜನೆಗಳನ್ನು ಭಾವಪೂರ್ಣವಾಗಿ ಹಾಡಬಲ್ಲವರಾಗಿದ್ದಾರೆ. ಇವರ ಮತ್ತೊಂದು ವೈಶಿಷ್ಟ್ಯ ತಾವೇ ರಚಿಸಿದ 'ದೇವೀ ನವರಾತ್ರಿ ಕೃತಿಗಳು, ಶನಿವಾರದಂದು ವಿಶೇಷವಾಗಿ ಗಣಪತಿಯ ಭಜನೆ ಹಾಗೂ 50ನೇ ಸ್ವಾತಂತ್ರ್ಯೋತ್ಸವದ ಸ್ವರ್ಣಜಯಂತಿಯ ಅಂಗವಾಗಿ ದೇಶ ಭಕ್ತಿ ಗೀತೆಗಳನ್ನೂ ದೇವೀ ನವರಾತ್ರಿ ಕೃತಿಗಳನ್ನೂ ಹಾಡಿದರು. ಒಡಗೂಡಿತ್ತು. ಅಂದು ಇವರಿಗೆ ಪಕ್ಕವಾದ್ಯಕ್ಕೆ ಮೃದಂಗ ವಾದಕರಾಗಿ ಶ್ರೀ ರವಿಯವರೂ, ಹಾರ್ಮೋನಿಯಂ ವಾದಕರಾಗಿ ಅನಂತ ಕೃಷ್ಣಾರವರು ಜೊತೆ ನೀಡಿದರು.

7-9-97ರಂದು ಶ್ರೀಮತಿ ಸಬಿತಾ ಸದಾಶಿವನ್ ಮತ್ತು ಇವರ ಮಗಳಾದ ಕೇಸರಿ ಕಪಿಲ್ ಹಾಗೂ ಇವರ ಶಿಷ್ಯೆ ಶ್ರೀ ದೇವಿ ಅಮಾದಮ್‌ರವರುಗಳು ದೇವರ ನಾಮದ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಶ್ರೀಮತಿ ಸಬಿತಾರವರು ಮುಂಬೈಯಲ್ಲಿ ಶ್ರೀ ವಿಶ್ವಪತಿ ಶಾಸ್ತ್ರಿಗಳಲ್ಲಿ ಪ್ರಾರಂಭದಲ್ಲಿ ಬಾಯಿ ಹಾಡಿಕೆ ಹಾಗೂ ವೈಲಿನ್ ಕಲಿತಿದ್ದಾರೆ. ನಂತರ ಶ್ರೀ ರಾಮಚಂದ್ರನ್‌ರವರಿಂದ ಬಾಯಿ ಹಾಡಿಕೆ ಕಲಿತಿದ್ದಾರೆ. ಇವರು ಆಕಾಶವಾಣಿ ಕಲಾವಿದರಾಗಿದ್ದು, ನಟುವಾಂಗ ಗಾಯಕಿಯೂ ಆಗಿದ್ದಾರೆ. ಇವರು ಲಂಡನ್, ಪ್ಯಾರಿಸ್, ಬೆಲ್ಜಿಯಂ, ಸಿಂಗಾಪೂರ, ರಷ್ಯ ಇತ್ಯಾದಿ ಹೊರದೇಶಗಳಲ್ಲೂ ತಮ್ಮ ಕಾರ್ಯಕ್ರಮ ನೀಡಿದ್ದಾರೆ.

ಇವರು ಮಹತಿ ರಾಗದಲ್ಲಿ ರಾಘವೇಂದ್ರರ ಮೇಲೆ, ಶುದ್ಧ ಕಲ್ಯಾಣಿಯಲ್ಲಿ ಮರಾಠಿ ಅಭಂಗ, ಆಹಿರ್ ಭೈರವಿನಲ್ಲಿ ನಿಂದಕರಿರಬೇಕು ಎಂಬ ಪುರಂದರ ದಾಸರ ಕೃತಿ ಹಾಗೂ ರಾಗ ಮಾಲಿಕೆಯನ್ನು ಹಾಡಿದರು. ದೈವ ದತ್ತವಾದ ಕಂಠ ಮಾಧುರ್ಯ ಇವರದಾಗಿದೆ.

8-9-97ರಂದು ಶ್ರೀಮತಿ ವಿಜಯ ಲಕ್ಷ್ಮಿ ನಾಥನ್‌ರವರ ಕರ್ನಾಟಕ ಶೈಲಿಯ ಶಾಸ್ತ್ರೀಯ ಗಾಯನವಿತ್ತು, ಶ್ರೀಮತಿ ವಿಜಯಲಕ್ಷ್ಮಿಯವರು ಮೈಸೂರು ಅಸೋಸಿಯೇಷನ್ನಿನ ಗಣಪತಿ ಮಹೋತ್ಸವದಲ್ಲಿ ಸುಮಾರು 45ವರ್ಷ ಕಾಲ ಸತತವಾಗಿ ಒಂದು ವರ್ಷವೂ ತಪ್ಪದೆ ತಮ್ಮ ಕಾರ್ಯಕ್ರಮ ನೀಡುತ್ತಿರುವುದೊಂದು ಸಾಧನೆಯೇ ಸರಿ! ಶುಶ್ರಾವ್ಯವಾದ ಕಂಠದಿಂದ ಇವರ ಹಾಡುಗಾರಿಕೆ ರಂಜಿಸಿತು.

ತಾ. 9-9-1997ರಂದು ವಾಶಿಯ ಕನ್ನಡ ಸಂಘದವರು ಶ್ರೀಮತಿ ಪ್ರತಿಮಾ ರಾವ್‌ರವರ ನೇತೃತ್ವದಲ್ಲಿ ದೇವರ ನಾಮಗಳನ್ನು ಹಾಡಿದರು. ಮೊಟ್ಟ ಮೊದಲು ಉಪನಿಷತ್ ಶ್ಲೋಕದಿಂದ ಇವರ ಹಾಡುಗಾರಿಕೆ ಪ್ರಾರಂಭವಾಯಿತು, ನಂತರ ಪರಬ್ರಹ್ಮ ರೂಪಂ ಗಣೇಶಂ ಭಜೇಹಂ ಎಂಬ ಕೃತಿ ಹಾಡಿದರು. ಅಮೃತವರ್ಷಿಣಿ ರಾಗದಲ್ಲಿ ಸರಸ್ವತಿ ಸ್ತುತಿ, ಸಂಭ್ರಮದಿ ಗಣಪತಿಯ ದರುಶನಕೆ ಬನ್ನಿ



'ಪರಾಶಕ್ತಿ' ತಂಡದವರಿಂದ ಹಾಡುಗಾರಿಕೆ

ಎಂಬ ರಾಗ ಮಾಲಿಕೆ. ಅದುತ ಬಾರಮ್ಮಾ ನಲಿದಾಡುತ ಬಾರಮ್ಮಾ ಎಂಬ ಲಕ್ಷ್ಮಿಸ್ತುತಿ ಇತ್ಯಾದಿಗಳನ್ನು ಚೆನ್ನಾಗಿ ಹಾಡಿದರು.

ತಾ. 11-9-97ರಂದು ಸಂಜೀವ್ ಜಾಗೀರ್ ದಾರ್‌ರವರ ಹಿಂದೂಸ್ತಾನಿ ಶೈಲಿಯ ಶಾಸ್ತ್ರೀಯ ಸಂಗೀತವಿತ್ತು. ಶ್ರೀ ಸಂಜೀವ್ ಜಾಗೀರ್‌ದಾರ್‌ರವರು ತಮ್ಮ 8ನೇ ವಯಸ್ಸಿನಿಂದಲೇ ಸಂಗೀತ ಶಿಕ್ಷಣವನ್ನು ಪ್ರಾರಂಭಿಸಿ ಹತ್ತು ವರ್ಷಕಾಲ (ಕೇಶವರಾವ್ ಬುವಾ'ರವರಲ್ಲಿ ಅಭ್ಯಾಸ ಮಾಡಿದ್ದಾರೆ. ನಂತರ ಶ್ರೀ ಗುಂಡಾ ಭಟ್ ಜೋಶಿಯವರ ಬಳಿ ಸಂಗೀತವನ್ನು ಮುಂದುವರಿಸಿದ್ದಾರೆ. ಇವರ ಸಂಗೀತದಾಹ ಇವರನ್ನು ರಲು ಬಿಡದಾದ ಕಾರಣ ಗುರುಗಳ ಅನ್ವೇಷಣೆ ಮಾಡುತ್ತಿದ್ದಾಗ ಹಿಂದೂಸ್ತಾನದ ಪ್ರಖ್ಯಾತ 'ಕಿರಾನ' ಘರಾನಾ ಶೈಲಿಯಲ್ಲಿ ದಿಗ್ಗಜರಾದ ಶ್ರೀ ಭೀಮಸೇನ್ ಜೋಶಿಯವರಲ್ಲಿ ಶಿಷ್ಯತ್ವ ಮಾಡುವ ಸದವಕಾಶ ಇವರದಾಯಿತು. ಪೂನಾದಲ್ಲಿ ಗುರುಗಳ ಮನೆಯಲ್ಲಿ ಇದ್ದು ಸತತವಾಗಿ 85ರಿಂದ 92ರ ವರೆಗೆ ಇವರ ಸಂಗೀತಾಭ್ಯಾಸ ನಡೆಯಿತು. ಇವರು ಮೆಕ್ಯಾನಿಕಲ್ ಇಂಜನೀಯರಿಂಗ್ ಪದವಿಯನ್ನು ಪಡೆದಿದ್ದಾರೆ. ಇವರು ಇಂಜನೀಯರಿಂಗ್ ಪದವೀಧರರಾದರೂ ಇವರ ಒಲವು ಸಂಗೀತದ ಕಡೆಗೆ ಜಾಸ್ತಿ.

ಇವರು ಇಂಪಾದ ತುಂಬು ಶಾರೀರವನ್ನು ದೈವದತ್ತವಾಗಿ ಹೊಂದಿದ್ದು ತಮ್ಮ ಆಳವಾದ ಅಭ್ಯಾಸ ಹಾಗು ಖ್ಯಾತ ಗುರುಗಳ ಮಾರ್ಗದರ್ಶನದಲ್ಲಿ ಪಳಗಿದವರಾಗಿದ್ದಾರೆ. ಇವರು 'ಕಿರನಾ ಘರನಾ' ಗಾಯಕರಾಗಿ ಉನ್ನತ ಸ್ಥಾನ ಹೊಂದುವುದರಲ್ಲಿ ಸಂದೇಹವಿಲ್ಲ.



ಶ್ರೀ ಸಂಜೀವ್ ಜಾಗೀರ್‌ದಾರ್ ಮತ್ತು ಸಂಗಡಿಗರು

ಇವರು ಸುಮಾರು 40ನಿಮಿಷಕಾಲ ಪೂರ್ವಿ ಕಲ್ಯಾಣಿಯಲ್ಲಿ ಖ್ಯಾಲ್ ಒಂದನ್ನು ಸಾದರ ಪಡಿಸಿ ಸಂಗೀತ ಪ್ರೇಮಿಗಳಿಗೆ ರಸ ದೌತಣ ಉಣಿಸಿದರು. ಇವರಿಗೆ ಅನೇಕ ಭಾಷಾ ಪರಿಚಯವಿದ್ದು ಕನ್ನಡ, ಮರಾಠಿ, ಹಿಂದೀ, ಗುಜರಾತಿಗಳಲ್ಲೂ ಭಜನೆ, ದೇವರ ನಾಮವನ್ನು ಸೊಗಸಾಗಿ ಹಾಡಬಲ್ಲರು. ಅಂದು ಭಾಗ್ಯದ ಲಕ್ಷ್ಮಿ ಬಾರಮ್ಮಾ ಎಂಬ ದಾಸರ ಪದ, ರಾಘವೇಂದ್ರರ ಸ್ತುತಿ, ಸಂತ ತುಕಾರಾಮರ ಅಭಂಗ ಸುಂದರವಾಗಿ ಸಾದರ ಪಡಿಸಿದರು. ಆಕಾಶವಾಣಿ ಹಾಗೂ T.V. ಕಲಾವಿದರಾದ ಇವರು ಹಿಂದೂಸ್ತಾನದ ಅನೇಕ ಪ್ರಖ್ಯಾತ ಕಲಾಪೋಷಕ ಸಂಸ್ಥೆಗಳಲ್ಲಿ ಹಾಡಿದ್ದಾರೆ.

ಇವರಿಗೆ ಸಂಗೀತ ನೀಡಿದ ಶ್ರೀ ಪ್ರಕಾಶ್ ಚಿಟ್ನಿಸ್‌ರವರು ಶ್ರೀ ವಿನಾಯಕ ಕಾಳೆಯವರ ಶಿಷ್ಯರಾಗಿದ್ದು ಹಾರ್ಮೋನಿಯ ನುಡಿಸಿದರು. ಇವರು ಹಿಂದೂಸ್ತಾನದ ಪ್ರಖ್ಯಾತ ಗಾಯಕರುಗಳಿಗೆ ಸಂಗತ್ ನೀಡಿದ್ದಾರೆ. ಶ್ರೀ ಜಾಗೀರ್‌ದಾರ್‌ರವರಿಗೆ ಒಳ್ಳೆಯ ಸಂಗತ್ ನೀಡಿದರು.

ತಬಲಾದಲ್ಲಿ "ಶ್ರೀ ದತ್ತಾ ಮಾಣೆಯವರು ಶ್ರೀ ಜಾಗೀರ್ ದಾರ್‌ರವರಿಗೆ ಒಳ್ಳೆಯ ಜೊತೆ ನೀಡಿದರು.

ಶ್ರೀ ಪ್ರಾಣೇಶ್ ಮತ್ತು ಅಂಕಲೀಕರ್‌ರವರು ತಾನ್‌ಪೂರಾದಲ್ಲಿದ್ದು ಒಳ್ಳೆ ಜೊತೆ ನೀಡಿದರು.

ತಾ. 12-9-97ರಂದು ಅಸೋಸಿಯೇಷನ್ನಿನಲ್ಲಿ 7ಘಂಟೆಗೆ ಮಹಿಳೆಯರಿಗೆ ಅರಿಶಿನ ಕುಂಕುಮದ

**FOR ALL YOUR DOMESTIC AND INTERNATIONAL TRAVEL ARRANGEMENTS**

*CONTACT*

**AUGUST TRAVEL SERVICE**

**Agents For**
**INDIAN AIR LINES,**
**EAST WEST,**
**MODI LUFT &**
**JET AIRLINES**

**REGD. OFFICE:**
3/15 ASHIANA, SECTOR 17,
VASHI, NEW BOMBAY.
PHONE: 768 25 91 * 768 25 58
767 09 02
GRAMS: AUGTRASERV
**ALSO AT:**
2/16, KABBUR HOUSE,
SION (E), BOMBAY-400 022.
PHONE: 407 29 84 * 409 35 73
* 407 77 50



ವಾಶಿ ಕನ್ನಡ ಸಂಘದ ಮಹಿಳಾ ವಿಭಾಗದಿಂದ ಹಾಡುಗಾರಿಕೆ



ಸಿಂಧು ಭೈರವಿ ತಂಡದವರು

ಕಾರ್ಯಕ್ರಮವಿತ್ತು. ಅಂದೇ 7-30ಕ್ಕೆ ಶ್ರೀಮತಿ ಕೌಸಲ್ಯಾ ರಘುನಂದನ್‌ರವರ ನೇತೃತ್ವದಲ್ಲಿ "ಸಿಂಧು ಭೈರವಿ" ತಂಡದವರು ದೇವರ ನಾಮಗಳನ್ನು ಹಾಡಿದರು. ಮೊದಲು ಹಂಸ ಧ್ವನಿಯಲ್ಲಿ ಗಣಪತಿ ಸ್ತುತಿಯಿಂದ ಪ್ರಾರಂಭಿಸಿದರು. ಕಲ್ಯಾಣಿಯಲ್ಲಿ ಮೂಕಾಂಬಿ ಸರಸ್ವತಿ ಜಗದೀಶ್ವರಿ, ವಸಂತದಲ್ಲಿ ಬಾರೋ ನಮ್ಮ ಮನೆಗೆ, ಹಿಂದೋಳದಲ್ಲಿ ಅಂಬಾನಂದನಾ, ನಾಟರಾಗದಲ್ಲಿ, ಗಜವದನಾ ಸಂರಕ್ಷ ತೋಹಂ, ಶ್ರೀ ರಂಜನಿಯಲ್ಲಿ, ಗಜವದನಾ ಕರುಣಾ ಸದನಾ ಎಂಬ ಕೃತಿಗಳನ್ನು ಹಾಡಿದರು. ಇವರಿಗೆ ಪಕ್ಕ ವಾದ್ಯದಲ್ಲಿ ಶ್ರೀಮತಿ ಸವಿತಾ ಸದಾಶಿವನ್‌ರವರಿದ್ದು ತಮಗೆ ದೊರೆತ ಅತ್ಯಲ್ಪ ಕಾಲದಲ್ಲೇ ತಾವು ಪ್ರತಿಭಾವಂತರೆಂಬುದನ್ನು ಸಿದ್ಧಪಡಿಸಿದರು. ಮೃದಂಗ ವಾದಕರಾಗಿ ಶಂಕರ ನಾರಾಯಣ್‌ರವರ ಮೃದಂಗವಾದನ ವಿದ್ವತ್ ಪೂರ್ಣವಾಗಿತ್ತು, ಇವರ ಶಿಷ್ಯರಾದ ಶ್ರೀಧರ್ ಬಂಜರ ನುಡಿಸಿದರು.

ತಾ. 13-9-97ರಂದು ಶ್ರೀಮತಿಯರಾದ ತೈಲಾಂಬಾಳ್ ಕೃಷ್ಣನ್ ಮತ್ತು ದೇವಕಿ ಐಯ್ಯರ್‌ರವರ



ಶ್ರೀ ಸ್ವರ್ಣಗೌರಿ ಮತ್ತು ಶ್ರೀ ಮಹಾಗಣಪತಿ ವಿಸರ್ಜನಾ ದಿನ ಮೆರವಣಿಗೆ.


ನೇತೃತ್ವದಲ್ಲಿ ದೇವರನಾಮಗಳ ಕಾರ್ಯಕ್ರಮವಿತ್ತು. ಇವರಿಗೆ ಮೃದಂಗ ನುಡಿಸಿದವರು ಶ್ರೀ ರಾಜ ಗೋಪಾಲ್‌ರವರು.

ಆರಾಣ ರಾಗದ ಶ್ರೀ ಗಣಪತಿಂ ಭಜೆ ಹಂ, ರೇವತಿಯಲ್ಲಿ ಭೊ ಶಂಭೊ, ಶಿವಂಭೊ ಬೃಂದಾವನ ಸಾರಂಗದಲ್ಲಿ ವಿಳಂಬ ಕಾಲದ ಕೃತಿ ಶ್ರೀ ರಾಮ ಕೋಟಿ ಜೀರಸ್ಮಿತೇ ಕ್ಷೀರಾಬ್ಧಿ ಶಯನಂ ಶ್ರೀ ಮನ್ನಾರಾಯಣಂ ಎಂಬ ಮಲಯ ಮಾರುತದ ಕೃತಿಗಳು ಗಮನ ಸೆಳೆದವು.

ಶ್ರೀ ರಾಮ ನೀ ನಾಮ ಎಂತರುಚಿರಾ ಎಂಬ ದೇವರ ನಾಮ, ಸಂತ ಕವಿ ನಾಸಿಕ ಮಹ್ವಾರ ನಾರಾಯಣ ನಾಮ ಜ ಲೇಕಾ ಎಂಬ ರಚನೆ ಶ್ರೀ ತುಳಸಿದಾಸರ ಹನುಮಾನ್ ಚಾಲೀಸ್‌ಗಳನ್ನು ಪ್ರಸ್ತುತ ಪಡಿಸಿದರು.

14-9-1997ರಂದು 10 ಘಂಟೆಯಿಂದ ಶಂಕರ ಮಠದ ವೇದ ಸಂಪನ್ನರಿಂದ ವೇದ ಘೋಷವಿದ್ದಿತು.

ನಂತರ 11ಘಂಟೆಗೆ ಶ್ರೀಮತಿ ಸುಶೀಲಾ ಆಚಾರ್ಯರ ನೇತೃತ್ವದಲ್ಲಿ ದೇವರ ನಾಮ ಹಾಡುಗಾರಿಕೆ ಇತ್ತು. ಲಂಬೋದರ ವಿಘ್ನೇಶ ಎಂಬ ಗಜಾನನ ಸ್ತುತಿ ಹಂಸ ಧ್ವನಿಯಲ್ಲಿ ಸರಸ್ವತಿ ಸ್ತುತಿ. ವಿಶ್ವೇಶ್ವರ ಪುತ್ರನೇ ವಿಶ್ವವಂದ್ಯ ಪೂಜ್ಯನೇ ಎಂಬ ಷಣ್ಮುಖ ಪ್ರಿಯದ ಕೃತಿ ಹಾಗೂ ಅಷ್ಟ ವಿನಾಯಕನ ಮೇಲಿನ ಕೃತಿಗಳು ಚೆನ್ನಾಗಿದ್ದವು.



ಶ್ರೀಮತಿ ತೈಲಾಂಬಾಳ್ ಮತ್ತು ಶಿಷ್ಯೆಯವರು

ಮಹಾ ಮಂಗಳಾರತಿಯ ನಂತರ ಶ್ರೀ ಸ್ವರ್ಣಗೌರಿ ಮತ್ತು ಶ್ರೀ ಗಣಪತಿಯನ್ನು ವಿಸರ್ಜಿಸಲು ಜಯ ಜಯಕಾರದೊಂದಿಗೆ ಟ್ರಕ್ಕಿನಲ್ಲಿ ಮೆರವಣಿಗೆ ಮಾಡಿ ದಾದರ್‌ನ ಸಮುದ್ರದಲ್ಲಿ ವಿಸರ್ಜಿಸಲಾಯ್ತು.

ನಂತರ ಪ್ರಸಾದ ವಿನಿಯೋಗದ ಅಂಗವಾಗಿ ಸರ್ವರಿಗೂ ಹಬ್ಬದೂಟವಿತ್ತು.

❀ ❀ ❀ ❀

# ನ್ಯಾಯ ಪಥ

ಭಾಗ - II

● ಉಮೇಶ್ ಕುಲಕರ್ಣಿ

ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಅಸಹಕಾರ ಚಳುವಳಿಯಲ್ಲಿ ಗಾಂಧೀಜಿಯವರು ಸತ್ಯಾಗ್ರಹ ಕರೆ ನೀಡಿದಾಗ ದೇಶದ ಬುದ್ಧಿ ಜೀವಿಗಳಾದ ಅಸಂಖ್ಯಾತ ನ್ಯಾಯವಾದಿಗಳು, ನ್ಯಾಯಾಧೀಶರು ಭಾವಜೀವಿಗಳಾಗಿ ತಮ್ಮ ವೃತ್ತಿ ತೊರೆದು, ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದರು. ಇವರೆಲ್ಲರೂ ನಂತರ ದೇಶ ಸ್ವಾತಂತ್ರ್ಯವಾಗಿದ್ದನ್ನು ಕಣ್ಣಾರೆ ಕಂಡು ಧನ್ಯಭಾವ ಅನುಭವಿಸಿದರು. ಇವರಲ್ಲಿ ಹಲವರ ಸ್ಮರಣೆ ಅತಿಮುಖ್ಯ:

### ಟಂಗಟೂರಿ ಪ್ರಕಾಶಂ

ಆಂಧ್ರದಲ್ಲಿ ಜನನ, ಓನಗೋಳದಲ್ಲಿ ವಕೀಲಿ. 32ನೇ ವಯಸ್ಸಿನಲ್ಲಿ ಇಂಗ್ಲೆಂಡಿಗೆ ಕಾನೂನು ಅಧ್ಯಯನಕ್ಕೆ ಪಯಣ. ಮರಳಿ ಮದ್ರಾಸ್‌ನಲ್ಲಿ ವಕೀಲಿ ವೃತ್ತಿ. ಗಾಂಧಿ ಕರೆಗೆ ಓಗೊಟ್ಟು ಚಳುವಳಿಯಲ್ಲಿ ಧುಮುಕಿದರು. `ಸ್ವರಾಜ್ಯ' ಪತ್ರಿಕೆ ಆರಂಭ. ಆಂಧ್ರದ ಮೊದಲ ಮುಖ್ಯಮಂತ್ರಿ.

ಈ ಆಂಧ್ರಕೇಸರಿ ಹೈದ್ರಾಬಾದ್‌ನಲ್ಲಿ ನಿಧನರಾದಾಗ 85 ವರ್ಷ.

### ವಲ್ಲಭ್ ಬಾಯ್ ಪಟೇಲ್

ಗುಜರಾತ್ ರೈತ ಕುಟುಂಬದಲ್ಲಿ ಜನನ. ಮೊದಲ ಜಿಲ್ಲಾ ಪ್ಲೀಡರ್. ನಂತರ ಇಂಗ್ಲೆಂಡಿಗೆ ಬ್ಯಾರಿಸ್ಟರ್ ಆಗಲು ಪಯಣ. ಮರಳಿ ಅಹ್ಮದಾಬಾದ್‌ನಲ್ಲಿ ಗಾಂಧಿ ಸಂಪರ್ಕವಾಗಿ ಕಾಂಗ್ರೆಸ್ ಚಳುವಳಿಗಾರ. ಈ `ಉಕ್ಕಿನ ಮನುಷ್ಯ' ಭಾರತದ ಮೊದಲ ಗೃಹ ಸಚಿವರಾಗಿ, ನೂರಾರು ಸಂಸ್ಥಾನಗಳು ಭಾರತದಲ್ಲಿ ವಿಲೀನವಾಗಲು ಕೈಕೊಂಡ ಕಠಿಣ ಶ್ರಮ, ಇತಿಹಾಸದಲ್ಲೇ ದಾಖಲೆ. ಬದುಕಿದ್ದು 75ವರ್ಷ.

### ಪಂಡಿತ್ ರವಿಶಂಕರ್ ಶುಕ್ಲಾ

ಮಧ್ಯಪ್ರದೇಶದಲ್ಲಿ ಜನನ. ಮುನ್ಸೀಫರಾಗಿ ರಾಜಿನಾಮೆ ನೀಡಿ ರಾಯಪುರನಲ್ಲಿ ವಕೀಲ ವೃತ್ತಿ. ಗಾಂಧಿ ಆದೇಶದಂತೆ ಜನಸಾಮಾನ್ಯರು ಚಳುವಳಿಯಲ್ಲಿ ತೊಡಗಲು `ಜಾಗೃತಿ-ಆಂದೋಲನ'. ಹಲವಾರು ಬಾರಿ ಜೇಲುವಾಸ. ಮಧ್ಯಪ್ರದೇಶದ ಮೊದಲ ಮುಖ್ಯ ಮಂತ್ರಿಯಾಗಿ `ಭಿಲಾಯ್ Steel Plant' ಹಾಗೂ ಹಲವಾರು ವಿಶ್ವವಿದ್ಯಾಲಯಗಳ ಆರಂಭಕ್ಕೆ ಕಾರಣ. ಅನಕ್ಷರತೆ, ಪರದಾ ಪದ್ಧತಿ ಹಾಗೂ ವರದಕ್ಷಿಣೆ ವಿರೋಧಿ, ಈ ಸಮಾಜ ಸುಧಾರಕ ಬದುಕಿದ್ದು 79 ವರ್ಷ.

### ಮನ್ನತ್ ಪದ್ಮನಾಭನ್

ಕೇರಳದಲ್ಲಿ ಜನನ. ಆರಂಭದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕ, ನಂತರ ವಿಶೇಷ ಪರೀಕ್ಷೆ ಪಾಸು ಮಾಡಿ, ಕೆಳಗಿನ ಮಟ್ಟದ ಕೋರ್ಟುಗಳಲ್ಲಿ ಲಾಯರಾಗಿ ವೃತ್ತಿ. "ಲಾಯರ್ ಸರ್ವೀಸ್ ಸೊಸೈಟಿ" ಪುನರ್ ಸಂಘಟಿಸಿ ಅದರ ಕಾರ್ಯದರ್ಶಿ. ಗಂಡು-ಹೆಣ್ಣು ಮಕ್ಕಳಿಗೆ ಆಸ್ತಿಯಲ್ಲಿ ಸಮಪಾಲು, ದೇವಾಲಯದಲ್ಲಿ ಅಸ್ಪೃಶ್ಯರಿಗೂ ಪ್ರವೇಶಕ್ಕೆ ಅನುಮತಿ, ದೀನ ದಲಿತರಿಗೆ ಉಚಿತ ವೈದ್ಯಕೀಯ ನೆರವು. ಹೀಗೆ ಸೇವೆಗೈದ ಈ `ಪದ್ಮಭೂಷಣ' ಬದುಕಿದ್ದು 92ವರ್ಷ.

### ಚಕ್ರವರ್ತಿ ರಾಜಗೋಪಾಲಾಚಾರಿ

ಜನಸಾಮಾನ್ಯರಿಗೆ ರಾಜಾಜಿ. ಮದ್ರಾಸಿನಲ್ಲಿ ಕಾನೂನು ಅಧ್ಯಯನ. 22ನೇ ವಯಸ್ಸಿಗೆ, ಸೇಲಂನಲ್ಲಿ ವಕೀಲಿ ಆರಂಭ. ಗಾಂಧಿ ಕರೆಗೆ ಓಗೊಟ್ಟು ವೃತ್ತಿಗೆ ತಿಲಾಂಜಲಿ. ಚಳುವಳಿಗಾರನಾಗಿ 5ಬಾರಿ ಜೇಲು. ಸ್ವಾತಂತ್ರ್ಯ ನಂತರ ಭಾರತದ ಮೊದಲನೆ `ಗವರ್ನರ್ ಜನರಲ್' ಆಗಿ ಸೇವೆ. ರಾಮಾಯಣ ಭಾರತ ಕೃತಿಗಳನ್ನು ಆಂಗ್ಲ ಭಾಷೆಯಲ್ಲಿ ನೀಡಿದ ಮಹಾನ್ ಚಿಂತಕ, ಈ `ಭಾರತ ರತ್ನ' ಬದುಕಿದ್ದು 94 ವರ್ಷ.

### ಕಾಶೀ ಪ್ರಸಾದ್ ಜಾಯಿಸ್‌ವಾಲ್

ಉತ್ತರ ಪ್ರದೇಶದಲ್ಲಿ ಜನನ. ಇಂಗ್ಲೆಂಡಿನಿಂದ ಕಾನೂನು ಹಾಗೂ ಭಾರತ ಪುರಾತನ ಇತಿಹಾಸದಲ್ಲಿ ಎಂಎ. ಪದವಿ ಮರಳಿ ಕಲ್ಕತ್ತಾ ಹಾಗೂ Patna High Courtನಲ್ಲಿ ವೃತ್ತಿ; ಮನು ಮತ್ತು ಯಾಜ್ಞವಲ್ಕರು ರಚಿಸಿದ ಹಿಂದೂ ಕಾಯ್ದೆಗಳ ಬಗ್ಗೆ ಇವರದ್ದು ಉಲ್ಲೇಖಾರ್ಹ ವಿಮರ್ಶೆ.

ನಾಣ್ಯ ಹಾಗೂ ಮುದ್ರಾಶಾಸ್ತ್ರಗಳ ಜ್ಞಾನದಿಂದಾಗಿ ಲಂಡನ್ನಿನ Royal Asiatic Societyಯಿಂದ ಆಹ್ವಾನಿಸಲ್ಪಟ್ಟ ಪ್ರಥಮ ಭಾರತೀಯ ಇವರು ಬಾಳಿ ಬದುಕಿದ್ದು 56ವರ್ಷ ಮಾತ್ರ.

### ರಾಮ್ ರಛಪಾಲ್

ಕಿರಿಯ ಮಗನಾದ್ದರಿಂದ ಹೆತ್ತವರಿಟ್ಟ ಮುದ್ದಿನ ಹೆಸರು -ಛೋಟುರಾಮ್. ಬಾಲ್ಯದಿಂದಲೇ ಓದಿನಲ್ಲಿ ಕುಶಾಗ್ರಮತಿ ಅಲಹಾಬಾದಿನಿಂದ ಕಾನೂನು ಪದವಿ ಆಗ್ರಾ-ರೋಹಕರ್ ಜಿಲ್ಲೆಯಲ್ಲಿ ವಕೀಲಿ ವೃತ್ತಿ. ಬ್ರಿಟಿಷ್ ಸರ್ಕಾರದಿಂದ `ರಾಯ್‌ಸಾಹೇಬ್' ಹಾಗು `ನೈಟ್'ಪದವಿಯಿಂದ ಭೂಷಿತರಾದರೂ, ಬಡರೈತರಿಗಾಗಿ ತಮ್ಮ ಬದುಕನ್ನು ಮೀಸಲಾಗಿಟ್ಟಿದ್ದರಿಂದ, ಜನರಿಂದ, `ದೀನಬಂಧು' ಎಂಬ ಶಾಶ್ವತ ಪದವಿ.

### ಪುರುಷೋತ್ತಮ ಟಂಡನ್

ಅಲಹಾಬಾದ್‌ನಲ್ಲಿ ಜನನ, ಕಾನೂನು ಹಾಗೂ ಇತಿಹಾಸದಲ್ಲಿ ಪದವಿ ಗಳಿಸಿ, ಅಲ್ಲಿಯ High Courtನಲ್ಲಿ ವೃತ್ತಿ, ಸಾರ್ವಜನಿಕ ಸೇವೆಗಾಗಿ, ವೃತ್ತಿಗೆ ತಿಲಾಂಜಲಿ. ಕಾಲೇಜು ವಿದ್ಯಾರ್ಥಿಯಾಗಿದ್ದಾಗ, ಕಾಂಗ್ರೆಸ್ ಪಕ್ಷದ ಸೆಳೆತ. ಆಗ ಸಂಘಟಿಸಿದ ರೈತ ಸಭಾಗಳು, ಸ್ವಾತಂತ್ರ್ಯ ಹೋರಾಟದಲ್ಲಿ ಉಲ್ಲೇಖನೀಯ. ಹಿಂದಿ ಭಾಷೆ ಸಾಹಿತ್ಯಕ್ಕೆ ಅಪಾರ ಸೇವೆ. ಗಾಂಧೀಜಿಯಿಂದ ರಾಜರ್ಷಿ ಎಂಬ ಬಿರುದು, ಸರ್ಕಾರದಿಂದ `ಭಾರತರತ್ನ' ಇವರು ಜೀವಿಸಿದ್ದು 84 ವರ್ಷಗಳ ಕಾಲ.

### ಡಾ| ರಾಜೇಂದ್ರ ಪ್ರಸಾದ್

ಬಿಹಾರ್‌ನಲ್ಲಿ ಜನನ. ಕಲ್ಕತ್ತಾದಿಂದ LL.B. ಹಾಗೂ M.L.ಪದವಿ. ಡಾನ್ ಸೊಸೈಟಿಯಿಂದ ರಾಜಕೀಯ ಚಟುವಟಿಕೆ ಆರಂಭ. ಕಲ್ಕತ್ತಾದಲ್ಲಿ ವಕೀಲಿ. ಗಾಂಧಿ ಆದೇಶದ ಮೇರೆಗೆ ಬಿಹಾರ್ ಭೂಕಂಪ ಪೀಡಿತರಿಗೆ ಪರಿಹಾರ - ಸೇವೆ.

ಅಸ್ತಮಾ ಪೀಡಿತರಾದರೂ ಹೋರಾಟದಲ್ಲಿ ಸಕ್ರಿಯ ಪಾತ್ರ. ಅನೇಕ ಬಾರಿ ಜೇಲು. ಭಾರತದ ಪ್ರಥಮ ರಾಷ್ಟ್ರಪತಿಯಾಗಿ 12ವರ್ಷ ಸೇವೆ. ಪಾಟ್ನಾ ಆಶ್ರಮದಲ್ಲಿ ನಿಧನರಾದಾಗ 77ವರ್ಷ ವಯಸ್ಸು.

### ಕುಲಾದೌರ್ ಚಾಲಿಹಾ:

ಅಸ್ಸಾಂನಲ್ಲಿ ಜನನ. ಹೆಚ್ಚುವರಿ ಸಹಾಯಕ ಕಮಿಷನರ್ ಆಗಿ ಸೇವೆ. ಅಫೀಮು ಪ್ರತಿಬಂಧಕಕ್ಕಾಗಿ ಆಗಲೇ ಚಳುವಳಿ. ನಂತರ ರಾಜಿನಾಮೆ ನೀಡಿ `ಜೋರ್‌ಹಾಟ್'ನಲ್ಲಿ ವಕೀಲಿ ವೃತ್ತಿ. ಜಲಿಯನ್‌ವಾಲಾಬಾಗ್ ನರಹತ್ಯೆಯಿಂದ ವ್ಯಗ್ರರಾಗಿ ಗಾಂಧಿ ಪಥದಲ್ಲಿ ಸಾಗಿ, ಪ್ರತಿಭಟನೆ, ಜೇಲುವಾಸ. ಭಾರತ ಸಂವಿಧಾನ ಸಭೆಯ ಸದಸ್ಯರೂ ಆಗಿದ್ದ ಇವರು ಬದುಕಿದ್ದು 77ವರ್ಷ ಮಾತ್ರ.

### ಬೆನಗಲ್ ನರಸಿಂಹರಾವ್

ಈ ಕನ್ನಡಿಗನ ಅಧ್ಯಯನ ಮದ್ರಾಸ್ ಹಾಗೂ ಕೇಂಬ್ರಿಜ್‌ನಲ್ಲಿ. ICS ಮುಗಿಸಿ, ಅಸ್ಸಾಂ ವಿಧಾನ ಸಭೆಗೆ "ವಿಧಿ ಪರಾಮರ್ಶದಾತ" (Legal - Remenberencer) ಆಗಿ ಸೇವೆ. ಸಿಂಧೂ ನದಿ ಜಲವಿವಾದ ಪರಿಹರಿಸಿ, ದೇಶಕ್ಕೆ Indus-Award ಮಾದರಿ ಒದಗಿಸಿದರು. ಹಿಂದೂ Law-Committeeಯ ಅಧ್ಯಕ್ಷರಾಗಿದ್ದರು. ಅಂತರಾಷ್ಟ್ರೀಯ ವಿಧಿ ಆಯೋಗ ಹಾಗೂ ಅಂತರಾಷ್ಟ್ರೀಯ ನ್ಯಾಯಾಲಯದ ಸದಸ್ಯರಾಗಿ ಆಯ್ಕೆಯಾದರು. ಸದಸ್ಯರಲ್ಲದಿದ್ದರೂ ಲೋಕ ಸಭೆ, ಇವರ ನಿಧನಕ್ಕೆ ವಿರಳ ಶ್ರದ್ಧಾಂಜಲಿ ಅರ್ಪಿಸಲಿತ್ತು.

### ಡಾ| ಅನುಗ್ರಹ ನಾರಾಯಣ್ ಸಿಂಗ್

ಬಿಹಾರ್‌ನಲ್ಲಿ ಜನನ. ಕಲ್ಕತ್ತಾದಿಂದ ಕಾನೂನು ಹಾಗೂ ಇತಿಹಾಸದಲ್ಲಿ ಪದವಿ. ಗಾಂಧಿ ಕರೆ ನೀಡಿದಾಗ ಪಟ್ನಾ ಹೈಕೋರ್ಟಿನ ವಕೀಲಿ ವೃತ್ತಿ ತ್ಯಾಗ. ಜೇಲುವಾಸ. ಮಹಾಮಾರಿ ಸಾಂಕ್ರಾಮಿಕ ರೋಗ ಪೀಡಿತರ ಸೇವೆ. ಕೆನಡಾ, ಸ್ವಿಜರ್‌ಲೆಂಡಿಗೆ

ಅಂತರ್ರಾಷ್ಟ್ರೀಯ ಶ್ರಮ ಸಂಘಟನೆ ಹಾಗೂ ನೇಪಾಳಿಗೆ ಖಾದ್ಯ ಹಾಗೂ ಕೃಷಿ ಶಿಷ್ಟ ಮಂಡಲದ ನೇತೃತ್ವ ನೀಡಿದ ಈ ದೇಶಭಕ್ತ ಬದುಕಿದ್ದು 70ವರ್ಷ.

### ಪಂಡಿತ ಗೋವಿಂದ್ ವಲ್ಲಭ್ ಪಂತ್

ಉತ್ತರಪ್ರದೇಶದಲ್ಲಿ ಜನನ. ಅಲಹಾಬಾದಿನಲ್ಲಿ ಕಾನೂನು ಪದವಿ ಹಾಗೂ ಕುಮಾಯೂನದಲ್ಲಿ ವಕೀಲಿ ವೃತ್ತಿ. ಸ್ವರಾಜ್ಯ ಪಾರ್ಟಿಯಲ್ಲಿದ್ದಾಗ ಲಾಠಿ ಏಟು, ಜೇಲುವಾಸ, ನಂತರ ಕಾಂಗ್ರೆಸಿಗರಾಗಿ ಕಾಕೋರಿ ಕೇಸಿನ ಕೈದಿಗಳನ್ನು ಬಿಡಿಸುವಲ್ಲಿ ಸಫಲ. ಭಾರತ ಸ್ವತಂತ್ರ್ಯ ಅಧಿನಿಯಮ'ದ ಐತಿಹಾಸಿಕ ಸಂಕಲ್ಪ ಸೂಚಿಸಿದ್ದು ಇವರು. ಸ್ವಾತಂತ್ರ್ಯಾ ನಂತರ ಯು. ಪಿ. ಮುಖ್ಯ ಮಂತ್ರಿ / ಕೇಂದ್ರ ಗೃಹ ಸಚಿವರಾಗಿ ಸೇವೆ. `ಭಾರತ ರತ್ನ' ಪಡೆದ ಇವರು -ಬದುಕಿದ್ದು 74 ವರ್ಷ.

### ಡಾ। ಶ್ರೀ ಕೃಷ್ಣ ಸಿನ್ಹ

ಮುಂಗೇರ್‌ನಲ್ಲಿದ್ದಾಗ ಗಂಗಾ ನದೀ ತೀರದಲ್ಲಿ ಆಣೆ ಮಾಡಿ ದೇಶದ ಮುಕ್ತಿಗೆ ಸಂಕಲ್ಪ ವ್ಯಕ್ತಿ. ಗಾಂಧಿ ಕರೆಗೆ ಓಗೊಟ್ಟು, ವೃತ್ತಿ ತೊರೆದು ಚಳುವಳಿಯಲ್ಲಿ ಭಾಗಿ, 8 ವರ್ಷ ಜೇಲು. ಗಾಂಧೀಜಿಯಿಂದ ಬಿಹಾರದ ಪ್ರಥಮ ಸತ್ಯಾಗ್ರಹಿ ಎಂಬ ಪ್ರಶಂಸೆ. ರಾಜಕೀಯ ಕೈದಿಗಳ ಬಿಡುಗಡೆಯಲ್ಲಿ ಯಶಸ್ವಿ. ಬಿಹಾರದ ಮೊದಲ ಮುಖ್ಯ ಮಂತ್ರಿ. ಜಾತಿ ವ್ಯವಸ್ಥೆಯ ವಿರೋಧಿ, ದೀನ ದಲಿತರ ಸೇವಕ. ಈ `ಬಿಹಾರ ಕೇಸರಿ' -ಬದುಕಿದ್ದು 74 ವರ್ಷ.

### ಡಾ। ಕೈಲಾಶ್‌ನಾಥ ಕಾಟ್ಜೂ

ಈ ಕಾಶ್ಮೀರಿ ಓದಿದ್ದು ಪಂಜಾಬ್‌ನ ಲಾಹೋರಿನಲ್ಲಿ. ಹೈಕೋರ್ಟ್ ವಕೀಲ್ ಪರೀಕ್ಷೆ ಪಾಸಾಗಿ ನಂತರ LLB, LLM, LLD ಪದವೀಧರರಾದರು. ಕಾನ್‌ಪುರ್, ಅಲಹಾಬಾದ್‌ನಲ್ಲಿ ವಕೀಲಿ. ಮೀರ ಪಿತ್ರೂರಿ ಪ್ರಕರಣದಲ್ಲಿ (ಆಜಾದ್‌ಹಿಂದ್ ಸೇನೆಯ) INA ಆಪಾದಿತ ಸೈನ್ಯಾಧಿಕಾರಿಗಳ ಪರ ವಕಾಲತು. ಗೃಹ ಕಾನೂನು, ಹಾಗು ರಕ್ಷಣಾ ಸಚಿವರಾಗಿ, ದೇಶಕ್ಕೆ ಸೇವೆ. 81 ವರ್ಷಕ್ಕೆ ನಿಧನ.

### ಕನ್ಹಯ್ಯಲಾಲ್ ಮಾಣಿಕಲಾಲ್ ಮುನ್ಷಿ

ಗುಜರಾತಿನಲ್ಲಿ ಜನಿಸಿ, ಬರೋಡದಲ್ಲಿ ಅಧ್ಯಯನ. ಅಡ್ವೋಕೇಟ್ ಓ.ಎಸ್. ಎಂದು ಮನ್ನಣೆ. ಚಳುವಳಿಯಲ್ಲಿ ಬಿಜಾಪುರದಲ್ಲಿ 2ವರ್ಷ ಜೇಲು. Young India ಸಹ ಸಂಪಾದಕ. ಗುಜರಾತ್ ಸಾಹಿತ್ಯ ಸಂಸತ್ ಸ್ಥಾಪಕ. ಮುಂಬೈನಲ್ಲಿ `ಭಾರತೀಯ ವಿದ್ಯಾಭವನ್'ಸ್ಥಾಪಕ ಅಧ್ಯಕ್ಷರಾಗಿ, ದೇಶಕ್ಕೆ ಇವರ ಅವಿಸ್ಮರಣೀಯ ಕೊಡುಗೆ. 125 ಸಾಹಿತ್ಯ ಕೃತಿಗಳ ರಚನೆ. ಈ ಪರಿಸರವಾದಿ ಬದುಕಿದ್ದು 84 ವರ್ಷ.

### ಆಸಫ ಅಲಿ

ಲಂಡನ್ನಿನಲ್ಲಿ ಕಾನೂನು ಪದವಿ, ಯಶಸ್ವಿ ವಕೀಲ. ಗಾಂಧಿಕರೆಯನ್ನುಯ ವೃತ್ತಿ ತ್ಯಾಗ. ಅರುಣಾ ಗಂಗೂಲಿಯೊಡನೆ ವಿವಾಹ. ಧರ್ಮ ಆಧರಿತ ರಾಷ್ಟ್ರ ನಿರ್ಮಾಣ ಧಿಕ್ಕರಿಸಿದ ರಾಷ್ಟ್ರೀಯ ವಾದಿ. ರೇಲ್ವೆ ಮಂತ್ರಿಯಾಗಿ, ಹಿಂದೂ ಮುಸಲ್ಮಾನರಿಗೆ ಪ್ರತ್ಯೇಕ ಕುಡಿವ ನೀರು ಸರಬರಾಜು ಪದ್ಧತಿ ನಿಲ್ಲಿಸಿದ ದಿಟ್ಟ ವ್ಯಕ್ತಿ. ಸ್ವಿಜರ್‌ಲೆಂಡ್‌ನಲ್ಲಿ ರಾಯಭಾರಿಯಾಗಿದ್ದಾಗ ಅಲ್ಲೇ ನಿಧನ.

### ಗಣೇಶ ವಾಸುದೇವ ಮಾವಳಂಕರ್

ಬರೋಡಾದಲ್ಲಿ ಜನನ. ಅಹ್ಮದಾಬಾದ್‌ನಲ್ಲಿ ಕಾನೂನು ಅಧ್ಯಯನ. ಭಾರತ, ಗಣರಾಜ್ಯವೆಂದು ಘೋಷಿತವಾದಾಗ ಅಸ್ಥಾಯಿ ಸಂಸದಿನ ಅಧ್ಯಕ್ಷ. ನಂತರ ಲೋಕ ಸಭೆಯ ಅಧ್ಯಕ್ಷರಾಗಿ ಹತ್ತು ವರ್ಷಗಳ ಅದ್ವಿತೀಯ ಸೇವೆ. ರಾಷ್ಟ್ರ ಮಂಡಳದ ಸಂಸದ್ ಸಮಿತಿಯ ಅಧ್ಯಕ್ಷರಾಗಿ ಆಯ್ಕೆ. ಎರಡು ಬಾರಿ ಸಂಸದೀಯ ಪ್ರತಿನಿಧಿಗಳ ಮಂಡಳದ ನೇತೃತ್ವ. ನೆಹರೂರವರಿಂದ `ಲೋಕ ಸಭೆಯ ಜನಕ" ಎಂಬ ಪ್ರಶಂಸೆ.

### ಬಾಳಾ ಸಾಹೇಬ್ ಗಂಗಾಧರ್ ಖೇರ್

ರತ್ನಗಿರಿಯಲ್ಲಿ ಜನನ. ಕರ್ನಾಟಕದ ಕುಂದಗೋಳ್‌ನಲ್ಲಿ ಬಾಲ್ಯ. ಗೋಖಲೆ ಸಲಹೆಯಂತೆ ಪುಣೆಗೆ ವಲಸೆ. ಮುಂಬೈನಲ್ಲಿ ಕಾನೂನು ಅಧ್ಯಯನ. ಲೋಕಮಾನ್ಯ ಪತ್ರಿಕೆಯ ಸಂಪಾದಕ. ಬ್ರಿಟನ್ನಿಗೆ ರಾಯಭಾರಿಯಾಗಿ ನೇಮಕ. ರಾಜ ಭಾಷಾ ಆಯೋಗದ ಅಧ್ಯಕ್ಷ. `ಗಾಂಧಿ ಮಾರ್ಗ' ತ್ರೈಮಾಸಿಕ ಪತ್ರಿಕೆ ಆರಂಭ. ಈ ಪದ್ಮ ವಿಭೂಷಣ ಬದುಕಿದ್ದು 69 ವರ್ಷ.

### ಸೈಫುದ್ದೀನ್ ಕಿಚ್ಲು

ಅಮೃತ ಸರದಲ್ಲಿ ಜನನ. ಲಂಡನ್ನಿನಲ್ಲಿ ಕಾನೂನು ಪದವಿ, ಜರ್ಮನಿಯಿಂದ Ph.D. ಭಾರತಕ್ಕೆ ಮರಳಿ ವಕೀಲಿ ಆರಂಭ. ಜಲಿಯನ್‌ವಾಲಾಬಾಗಿನ ಘಟನೆಯ ಕಾಲದಲ್ಲಿ ಇವರ ಬಂಧನ, ದೇಶದ ತುಂಬ ಉಗ್ರ ಪ್ರತಿಕ್ರಿಯೆ. ನೌಜವಾನ್ ಭಾರತ ಸಭಾ ಸಂಸ್ಥೆ ರಚಿಸಿ ಕ್ರಾಂತಿಕಾರಿಗಳಿಗೆ ಕುಮ್ಮಕ್ಕು. ಉತ್ತಮ ವಾಗ್ಮಿ. ಹೀಗಾಗಿ ಬ್ರಿಟಿಷರಿಂದ ಭಾಷಣಕ್ಕೂ ಪ್ರತಿಬಂಧ. ಭಾರತದ ವಿಭಜನೆ, ಜಾತೀಯ ಶಕ್ತಿಗಳಿಗೆ ರಾಷ್ಟ್ರೀಯತೆಯ ಬಲಿ ಎಂಬ ದೃಢ ವಿಶ್ವಾಸ ಲೆನಿನ್ ಪ್ರಶಸ್ತಿ ಪಡೆದ ಮೊದಲ ಭಾರತೀಯ -ಬದುಕಿದ್ದು 75 ವರ್ಷ.

### ಬಿಷ್ಣು ರಾಮ ಮೇಧಿ

ಹಾಜೋ ಎಂಬ ಸ್ಥಾನದಲ್ಲಿ ರೈತ ಕುಟುಂಬದಲ್ಲಿ ಜನನ. ಢಾಕಾ ವಿಶ್ವವಿದ್ಯಾಲಯದಿಂದ ಆರ್ಗೆನಿಕ್ ರಸಾಯನ ಶಾಸ್ತ್ರದಲ್ಲಿ ಎಂ. ಎಸ್ಸಿ. ನಂತರ B.L. ಮುಗಿಸಿ ಗೌಹಾತಿಯಲ್ಲಿ ವಕೀಲಿ ಆರಂಭ. ಗಾಂಧೀವಾದಿ ಚಳುವಳಿಗಾರ. ಅಸ್ಸಾಂ ಮುಖ್ಯ ಮಂತ್ರಿಯಾಗಿ 8 ವರ್ಷ ಸೇವೆ. ಸಂತಾನ ಹೀನರಾಗಿ ಸಾವನ್ನಪ್ಪುವ ಮುನ್ನ ತಮ್ಮ ಎಲ್ಲ ಸಂಪತ್ತನ್ನು ಸಾರ್ವಜನಿಕ ಕಾರ್ಯಕ್ಕೆ ದಾನ ನೀಡಿ, 93ನೇ ವರ್ಷದಲ್ಲಿ ನಿಧನ.

### ಶರತ್ ಚಂದ್ರ ಬೋಸ್

"ಪ್ರಿನ್ಸ್ ಆಫ್ ಬ್ಯಾರಿಸ್ಟರ್" ಎಂದೇ ಖ್ಯಾತಿ ಪಡೆದ ಇವರು ಗಾಂಧೀವಾದಿ. ಬಂಧು ಸುಭಾಷ್‌ಚಂದ್ರ ಬೋಸ್‌ಗೆ ಸ್ಫೂರ್ತಿಯ ಸೆಲೆ. ಲಿಬರ್ಟಿ, ದಿ-ನೇಶನ್ ಹಾಗೂ ಮಹಾ ಜಾತಿ ಪತ್ರಿಕೆಯ ಆರಂಭ. ಚಿತ್ತಗಾಂಗ್ ಶಸ್ತ್ರಾಗಾರ ಲೂಟಿ ಮೊಕದ್ದಮೆಯಲ್ಲಿ ಅಭಿಯುಕ್ತರ ಪರ ವಕಾಲತ್ತು. ದೇಶ ವಿಭಜನೆ ವಿರೋಧಿಸಿ, ಸಂಘರ್ಷ ಮಾಡಿ [illegible] ವರ್ಷ ಬದುಕಿದ ಧೀರ.

### ಆಚಾರ್ಯ ನರೇಂದ್ರ ದೇವ್

ಉತ್ತರ ಪ್ರದೇಶದಲ್ಲಿ ಜನನ. ಇವರನ್ನು ಭಾರತದಲ್ಲಿ ಲೋಕ ತಾಂತ್ರಿಕ ಸಮಾಜವಾದಿ ಆಂದೋಲನದ ಜನಕರೆಂದೇ ಹೇಳಬಹುದು. ಬೌದ್ಧ ದರ್ಶನ ಮತ್ತು ಬೌದ್ಧ ಸಂಸ್ಕೃತಿಯಲ್ಲಿ ಅಪಾರ ಆಸಕ್ತಿ. ಇವರ ಅನೇಕ ಉತ್ತಮ ಸಾಹಿತ್ಯ ಕೃತಿಗಳು ಬೌದ್ಧ ಧರ್ಮಕ್ಕೆ ಸಂಬಂಧಿಸಿದ್ದು ಒಂದು ವಿಶೇಷ. ಯು. ಪಿ. ವಿಧಾನ ಸಭೆ ಹಾಗು ರಾಜ್ಯ ಸಭೆ ಸದಸ್ಯರೂ ಆಗಿದ್ದರು. ಬದುಕಿದ್ದು 67 ವರ್ಷ.

### ಡಾ। ಪಿ. ಸುಬ್ಬರಾಯನ್

ತಮಿಳುನಾಡಿನ ಗೌಂಡರ್ ಕುಟುಂಬದಲ್ಲಿ ಜನನ. ಮದ್ರಾಸಲ್ಲಿ ಓದುವಾಗಲೇ, ಬ್ರಾಹ್ಮೊ ಸಮಾಜದ, ಮಂಗಳೂರಿನ ರಾಧಾಬಾಯಿಯೊಡ[illegible] ವಿವಾಹ, ರಾಜಾಜಿಯವರ ಆಶೀರ್ವಾದ. ಡಬ್ಲಿನ್‌ನಿಂದ `ಲಾ'ನಲ್ಲಿ ಡಾಕ್ಟೋರೇಟ್. ಮದ್ರಾಸ್ ಗೃಹ ಸಚಿವರಾಗಿ, `ಜಮೀಂದಾರಿ ಪದ್ಧತಿ ಉನ್ಮೂಲನ ಅಧಿನಿಯಮ' ರೂಪಿಸಿದರು. ಇಂಗ್ಲೆಂಡಿನ MCCಗಾಗಿ ಆಡಿದ ಕ್ರಿಕೆಟ್ ಆಟಗಾರ. ಕ್ರಿಕೆಟ್ ಕಂಟ್ರೋಲ್ ಬೋರ್ಡ್‌ನ ಸ್ಥಾಪಕ ಅಧ್ಯಕ್ಷ. ಬದುಕಿದ್ದು 73 ವರ್ಷ.

### ಜವಾಹರ್‌ಲಾಲ್ ನೆಹರು

ಮೂಲತಃ ಕಾಶ್ಮೀರಿ, ಅಲಹಾಬಾದ್‌ನ ಶ್ರೀಮಂತ ದೇಶಭಕ್ತರ ಕುಟುಂಬದಲ್ಲಿ 14ನೆಯ ನವೆಂಬರ್ ಜನನ. ಇಂಗ್ಲೆಂಡಿನಿಂದ 23ನೆಯ ವಯಸ್ಸಿನಲ್ಲಿ ಬ್ಯಾರಿಸ್ಟರ್ ಪದವಿ. 1916ರಲ್ಲಿ ಗಾಂಧಿಯೊಡನೆ ಮೊದಲ ಭೇಟಿ, ಕೊನೆತನಕ ಗುರು-ಶಿಷ್ಯರ ಅಮರ ಸಂಬಂಧ. ಬ್ರಿಟಿಶರ ಅನ್ಯಾಯದ

ಕಾನೂನನ್ನು ಧಿಕ್ಕರಿಸಿ ಹಲವಾರು ಬಾರಿ ಜೇಲು ಕಂಡ ಧೀರ. ಭಾರ[illegible] ಮೊದಲ ಪ್ರಧಾನಿ, ಆಳಿದ್ದು 17ವರ್ಷ, [illegible] ನವನಿರ್ಮಾಣಕ್ಕೆ ಹಂಬಲಿಸಿ ರಾಷ್ಟ್ರೀಯ ಯೋಜನಾ ಆಯೋಗ ರಚಿಸಿ, ಪಂಚವಾರ್ಷಿಕ ಯೋಜನೆ ಜಾರಿಗೆ ತಂದ ಕುಶಾಗ್ರ ಆಡಳಿತಗಾರ. ಅಂತರ್ರಾಷ್ಟ್ರೀಯ ರಾಜಕೀಯಕ್ಕೆ ಅಲಿಪ್ತ ರಾಷ್ಟ್ರ ನೀತಿ ಹಾಗೂ ಪಂಚಶೀಲ ಆಧರಿಸಿ, ಸಹಬಾಳ್ವೆ, ಸಹಕಾರ ನೀತಿಯನ್ನೂ ರೂಪಿಸಿದ ಚಾಣಕ್ಯ. ಸಂಯುಕ್ತ ರಾಷ್ಟ್ರ ಸಂಘದ ಸಂಸ್ಥಾಪಕ ಸದಸ್ಯರಲ್ಲಿ ಭಾರತವೂ ಒಂದು ದೇಶ. ಇವರ ಘೋಷಣಾ ಪತ್ರದ ಪಾಲನೆ ಹಾಗೂ ಸಹಕಾರಕ್ಕೆ ಬದ್ಧತೆಯನ್ನು ಸ್ವಾತಂತ್ರ್ಯ ಪೂರ್ವದಲ್ಲಿ ಪೋಷಿಸಿದ ದೂರದೃಷ್ಟಿಯ ನಾಯಕ. ಭಾರತದಲ್ಲಿ ಹದಿನಾರನೆಯ ಹೊಸರಾಜ್ಯ ನಾಗಾಲ್ಯಾಂಡನನ್ನು ರಚಿಸಿ, ಗಿರಿಜನರಿಗೆ [illegible]ಮ್ಮತನ ಉಳಿಸಿಕೊಂಡು ನವಭಾರತ ನಿರ್ಮಾಣದಲ್ಲಿ ತೊಡಗಲು ಕರೆ. ಮಕ್ಕಳ ಪ್ರಿಯ ನೆಹರೂ ಅವರ ಜನ್ಮದಿನ ಇಂದಿಗೂ `ಬಾಲ್ಯದಿನಾಚರಣೆ'ಯಾಗಿ ನೆನಪು. ಮಕ್ಕಳಿಗೆ ಅವರೂ ಎಂದೆಂದಿಗೂ `ಚಾಚಾ ನೆಹರು ' ಜೈಲಿನಲ್ಲಿದ್ದಾಗ ಬರೆದ ಆತ್ಮಚರಿತ್ರೆ, `ತಂದೆ ಮಗಳಿಗೆ ಬರೆದ ಪತ್ರಗಳು, `ಪ್ರಪಂಚದ ಇತಿಹಾಸದ ಪಕ್ಷಿನೋಟ' `ಸಂಶೋಧಿತ ಭಾರತ' ಸಾಹಿತ್ಯಕ್ಕೆ ಉತ್ತಮ ಕೊಡುಗೆಗಳು. 1916ರಲ್ಲಿ ಕಮಲಾಕೌಲ್‌ರೊಡನೆ ವಿವಾಹ. 1936ರಲ್ಲಿ ಪತ್ನಿ ವಿಯೋಗ. ಪುತ್ರಿ ನಾಯಕಿ ಇಂದಿರಾರನ್ನು ದೇಶಕ್ಕೆ ನೀಡಿ, 75ವರ್ಷದ ಇವರ ಬದುಕು ಸಾರ್ಥಕ ಜೀವನ.

### ಗೋಪಿನಾಥ ಬರ್ದಲೈ

ಕಲ್ಕತ್ತಾದಲ್ಲಿ ಕಾನೂನು ಅಧ್ಯಯನ. 27ನೇ ವರ್ಷಕ್ಕೆ ವಕೀಲಿ ವೃತ್ತಿ ಆರಂಭ. ಅಸ್ಸಾಂನಲ್ಲಿ [illegible]ಂಧೀವಾದಿಯಾಗಿ ಚಳುವಳಿಯಲ್ಲಿ ಜೇಲುವಾಸ. ಆಗಲೇ ಅನೇಕ ಸಂತ ಮಹಂತರ ಜೀವನ ದರ್ಶನದ ಸಾಹಿತ್ಯ ರಚನೆ. ಅಸ್ಸಾಂ ಪ್ರದೇಶವನ್ನು ಪಾಕಿಸ್ತಾನಕ್ಕೆ ಸೇರಿಸಲು ಮುಸ್ಲಿಂ ಲೀಗ್ ಪ್ರಯತ್ನಿಸಿದಾಗ ಪ್ರತಿಭಟಿಸಿದ ಧೀರ. ಸರ್ದಾರ್ ಪಟೇಲರಿಂದ `ಅಸ್ಸಾಮಿನ ಹುಲಿ' ಜನರಿಂದ `ಲೋಕ ಪ್ರೀಯ' ಎಂದೇ ಪರಿಚಿತ. ಬದುಕಿದ್ದು 60ವರ್ಷ.

### ಶ್ರೀ ಪ್ರಕಾಶ್

ಭಾರತ ರತ್ನ ಡಾ| ಭಗವಾನದಾಸರ ಪುತ್ರ ಹುಟ್ಟಿದ್ದು ವಾರಣಾಸಿಯಲ್ಲಿ. ಇಂಗ್ಲೆಂಡಿನಲ್ಲಿ ಇತಿಹಾಸ ಹಾಗು ಕಾನೂನು ಅಧ್ಯಯನ. ಅನ್ನಿಬೆಸೆಂಟರ ಪ್ರಭಾವಕ್ಕೆ ಒಳಗಾಗಿ `ಥಿಯೋಸಾಫಿಕಲ್ ಸೊಸೈಟಿ' ಸದಸ್ಯರಾಗಿ ಸೇರ್ಪಡೆ. ಗಾಂಧಿವಾದಿಯಾಗಿ ಚಳುವಳಿಯಲ್ಲಿ ಭಾಗಿ, ಜೇಲುವಾಸ ಸ್ವಾತಂತ್ರ್ಯ ನಂತರ ಆಸ್ಸಾಂ, ಮದ್ರಾಸ್ ಹಾಗೂ ಮಹಾರಾಷ್ಟ್ರದ ರಾಜ್ಯಪಾಲ; ಪಾಕಿಸ್ತಾನಕೆ, ರಾಜದೂತರಾಗಿ ಸೇವೆ. ಕಾಶೀ ವಿದ್ಯಾಪೀಠ ಸ್ಥಾಪನೆಯಲ್ಲಿ ತಂದೆಗೆ ನೆರವು. ಈ ಪದ್ಮ ವಿಭೂಷಣ ಬದುಕಿದ್ದು 81ವರ್ಷ.

### ಜಯರಾಮ್‌ದಾಸ್ ದೋಲತ್ ರಾಮ್

ಕರಾಚಿಯ ಸಿಂಧಿ ಕುಟುಂಬದಲ್ಲಿ ಜನನ. ಅಮೃತಸರ A.I.C.C.ಯಲ್ಲಿ ಗಾಂಧೀಜಿಯವರ ಸಂಕಲ್ಪವನ್ನು ವ್ಯಾಖ್ಯೆ ಮಾಡಿದ ರೀತಿ ನೋಡಿ, ಗಾಂಧೀಜೀಯವರ ವಿಶ್ವಸನೀಯ ವ್ಯಕ್ತಿಯಾದರು. ಉಪ್ಪಿನ ಸತ್ಯಾಗ್ರಹದಲ್ಲಿ ಇವರ ತೊಡೆಗೆ ಪೋಲೀಸರು ಹಾರಿಸಿದ ಗುಂಡೇಟು. ಸಿಂಧ್ ಪ್ರಾಂತಕ್ಕೆ ಮಾಡಿದ ಸೇವೆ ಕಂಡು ಸರೋಜಿನಿ ನಾಯ್ಡು ಇವರನ್ನು `ಮರಳು ನಾಡಿನ ದೀಪ' ಎಂದು ಕರೆದರು. ಗಾಂಧೀಜೀಯವರ ಸಮಗ್ರ ಸಾಹಿತ್ಯ ಸಂಕಲಿಸಿದರು. ಸಿಂಧಿ ಭಾಷೆಯನ್ನು, ರಾಷ್ಟ್ರೀಯ ಭಾಷೆಗಳಲ್ಲಿ ಅದೂ ಒಂದು ಎಂದು ಭಾರತ ಸರ್ಕಾರ ಸ್ವೀಕರಿಸಲು ಇವರೇ ಕಾರಣ. ಬದುಕಿದ್ದು 88ವರ್ಷ.

ಡಾ| ಭೀಮರಾವ್ ರಾಮ್‌ಜಿ ಅಂಬೇಡ್ಕರ್ :ಮಹಾರಾಷ್ಟ್ರದ ದಲಿತ ಕುಟುಂಬದಲ್ಲಿ ಜನನ. 22ನೇ ವಯಸ್ಸಿಗೆ ಅಮೇರಿಕಾದಲ್ಲಿ ಅಧ್ಯಯನ, ಡಾಕ್ಟರೇಟ್ ಪದವಿ. ಲಂಡನ್ನಿನಿಂದ ಅರ್ಥಶಾಸ್ತ್ರ, ಕಾನೂನು ಪದವಿ. ಇವರು 1956ರಲ್ಲಿ ಬೌದ್ಧ ಧರ್ಮದೀಕ್ಷೆ ಗ್ರಹಣ ಮಾಡಿದರು. ಭಾರತೀಯ ಸಂವಿಧಾನದ ಪ್ರಮುಖ ನಿರ್ಮಾತಾ ಹಾಗೂ ಮಾನವ ಅಧಿಕಾರಗಳ ಪೋಷಕರೆಂದು ಭಾರತ ಇತಿಹಾಸದಲ್ಲಿ ಅಮರ. 65ವರ್ಷ ಬಾಳಿದರು. ಈ ಭಾರತರತ್ನ.

### ಭೀಮಸೇನ್ ಸಚ್ಚರ್

ಲಾಹೋರಿನಲ್ಲಿ ಕಾನೂನು ಪದವಿ. ಗುಜ್ರನ್‌ವಾಲಾದಲ್ಲಿ ವೃತ್ತಿ. ಲಾಹೋರಿನ ನ್ಯಾಶನಲ್ ಯುನಿವರ್ಸಿಟಿ ರಿಜಿಸ್ಟ್ರಾರಾಗಿ ಸೇವೆ. ಗಾಂಧೀ ಚಳುವಳಿಯಲ್ಲಿ ಭಾಗಿ. "ಸನ್ ಲೈಟ್ ಇನ್ಸೂರೆನ್ಸ್ ಕಂಪನಿಯ ಸ್ಥಾಪಕ. ಪಂಜಾಬಿನ ಮುಖ್ಯ ಮಂತ್ರಿಯಾಗಿ ಒರಿಸ್ಸಾ, ಆಂಧ್ರಪ್ರದೇಶದ ರಾಜ್ಯಪಾಲರಾಗಿ, ಶ್ರೀಲಂಕಾದ ರಾಜದೂತರಾಗಿ ಸೇವೆ. ಗುರುನಾನಕ್ ಫೌಂಡೇಶನ್, ಹಾಗೂ ಖಾದೀ ಗ್ರಾಮೋದ್ಯೋಗ ಸಂಘದ ಅಧ್ಯಕ್ಷ. ಬದುಕಿದ್ದು 84ವರ್ಷ.

### ವರಾಹಗಿರಿ ವೆಂಕಟಗಿರಿ

ಬೆರ್‌ಹಾಂಪುರದಲ್ಲಿ ಜನನ. ಆಯರ್‌ಲೆಂಡ್ ನಲ್ಲಿ ಕಾನೂನು ಅಧ್ಯಯನ. ಅಲ್ಲಿನ ಕಾರ್ಮಿಕನ ಸಂಘಟನೆ ಪರಿಚಯ. 1914ರಲ್ಲಿ ಲಂಡನ್ನಿನಲ್ಲಿ ಗಾಂಧೀಜಿ ಸಂಪರ್ಕ, ಜೀವನದಲ್ಲೇ ಹೊಸ ತಿರುವು. ಸ್ವಾತಂತ್ರ್ಯ ಪೂರ್ವದಲ್ಲೇ ಲಂಡನ್ನಿಗೆ ಭಾರತೀಯ ಶ್ರಾಮಿಕ ವರ್ಗದ ಪ್ರತಿನಿಧಿಯಾಗಿ ಸೇರ್ಪಡೆ. ಶ್ರೀಲಂಕಾದ ರಾಜದೂತ. ಅನೇಕ ರಾಜ್ಯಗಳ ರಾಜ್ಯಪಾಲ. ಉಪರಾಷ್ಟ್ರಪತಿ ನಂತರ ರಾಷ್ಟ್ರಪತಿಯಾಗಿ ಸೇವೆ.

### ರಾಮ್‌ಚಂದ್ರ ಸಖಾರಾಮ್ ರುಯಿಕರ್

ಮಹಾರಾಷ್ಟ್ರದಲ್ಲಿ ಜನನ. ಅಲಹಾಬಾದ್‌ನಲ್ಲಿ ಕಾನೂನು ಪದವಿ, ನಾಗಪುರದಲ್ಲಿ ವಕೀಲಿ. ಕಾರ್ಮಿಕ ಕ್ಷೇತ್ರದಲ್ಲಿ ಆಸಕ್ತಿ. 1927ರಲ್ಲಿ ನಾಗಪುರ ಟೆಕ್ಸ್‌ಟೈಲ್ ಕಾರ್ಮಿಕರ ಯೂನಿಯನ್ ಸ್ಥಾಪನೆ. ಅದು ಪ್ರಥಮಬಾರಿಗೆ ರಿಜಿಸ್ಟರ್ ಆದ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರ. ನಂತರ ಟೆಕ್ಸ್‌ಟೈಲ್ ವರ್ಕರ್ಸ್ ಫೆಡರೇಶನ್ ರಚನೆ. ಕಲ್ಲಿದ್ದಲು ಹಾಗು ಗಣಿ ಕಾರ್ಮಿಕರಿಗಾಗಿ ಶ್ರಮಿಕ ಸಂಘ ಸಂಘಟಿಸಿ ಅವರ ಹಕ್ಕಿಗಾಗಿ ಹೋರಾಟ. ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ಅಧ್ಯಕ್ಷ.

### ನರಹರಿ ವಿಷ್ಣು ಗಾಡಿಗೀಳ್

ಮುಂಬಯಿಯಲ್ಲಿ ಕಾನೂನು ಅಧ್ಯಯನ. ಗಾಂಧಿ ಪ್ರಭಾವ, ಅಪ್ಪಟ ಕಾಂಗ್ರೆಸಿಗರಾಗಿ ಸೇವೆ. ಸ್ವತಂತ್ರ ಭಾರತದಲ್ಲಿ ಕೇಂದ್ರದಲ್ಲಿ ಹಲವಾರು ಖಾತೆಗಳಲ್ಲಿ ಸಚಿವವರಾಗಿ ಸೇವೆ. ಭಾಕ್ರಾ, ಹಿರಾಕುಡ್, ಕೋಯ್ನಾ ಇವರು ಆರಂಭಿಸಿದ ಯೋಜನೆಗಳು. ಪಂಜಾಬಿನ ರಾಜ್ಯಪಾಲ ಪೂಣೆಯಲ್ಲಿ ವೈಸ್‌ಛಾನ್ಸ್‌ಲರಾಗಿ ಸೇವೆ. ಲೇಖಕರಾಗಿ ಹಲವಾರು ವಿಷಯಗಳ ಬಗ್ಗೆ ಸಾಹಿತ್ಯ ರಚನೆ. ಬದುಕಿದ್ದು 70 ವರ್ಷ.

### ಪಂಡಿತ ಕುಂಜಿಲಾಲ್ ದುಬೆ

ಮಧ್ಯಪ್ರದೇಶದಲ್ಲಿ ಜನನ. ಅಲಹಾಬಾದ್‌ನಲ್ಲಿ ಕಾನೂನು ಅಧ್ಯಯನ. ಜಬ್ಬಲ್‌ಪುರನಲ್ಲಿ ವಕೀಲಿ. ಗಾಂಧಿವಾದಿ ಚಳುವಳಿಗಾರ. ಸ್ವಾತಂತ್ರ್ಯ ನಂತರ ನಾಗಪುರ ವಿಶ್ವವಿದ್ಯಾಲಯದ ಚಾನ್ಸಲರ್ , ಬರ್ಮಾ, ಶ್ರೀಲಂಕಾದ ಅಂತರ್ ವಿಶ್ವವಿದ್ಯಾಲಯ ಮಂಡಳಿಯ ಅಧ್ಯಕ್ಷ. ಮಾತೃ ಭಾಷೆಯಲ್ಲಿ ಶಿಕ್ಷಣ ನೀಡಲು ಪಠ್ಯ ಪುಸ್ತಕಗಳ ಅನುವಾದ. ಹಿಂದಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ. ಈ ಪದ್ಮ ಭೂಷಣ. ಬದುಕಿದ್ದು 74ವರ್ಷ.

### ಜನನಾಯಕ ದೇಬೇಶ್ವರ ಶರ್ಮಾ

ಅಸ್ಸಾಂನಲ್ಲಿ ಜನನ. ಕಲ್ಕತ್ತಾದಲ್ಲಿ ಕಾನೂನು ಪದವಿ. ಜೋರ್‌ಹಾಟ್‌ನಲ್ಲಿ ವಕೀಲಿ ಆರಂಭ. ಕಾಂಗ್ರೆಸ್ ಸ್ವಯಂ ಸೇವಕ ದಳದ ಕಮಾಂಡರ್ ಇನ್ ಚೀಫ್ ಸ್ವಾತಂತ್ರ್ಯ ನಂತರ ಲೋಕ ಸಭೆ ಅಂದಾಜು ಸಮಿತಿಯ ಸದಸ್ಯ. ಅಂಗವಿಕಲರಿಗಾಗಿ, ಜೋರ್‌ಹಾಟ್‌ನಲ್ಲಿ ಅಂಧರ ಶಾಲೆ. ಅಸ್ಸಾಂ ಪ್ರಕಾಶನ ಪರಿಷತ್ ರಚನೆ. ಆಸ್ಸಾಂನಲ್ಲಿ ಫ್ಲಾಯಿಂಗ್ ಕ್ಲಬ್ ಸ್ಥಾಪಕ. ಜನ್ಮ ಭೂಮಿ ಪ್ರಕಾಶನ, ಇವರು ಬದುಕಿದ್ದು 97 ವರ್ಷ.

### ಶಂಕರ್ ಪಿಳ್ಳೈ

ಕೇರಳದಲ್ಲಿ ಜನನ. ಮುಂಬೈನಿಂದ ಕಾನೂನು ಪದವಿ. ಸ್ವಾತಂತ್ರ್ಯ ನಂತರ ವ್ಯಂಗ್ಯ ಚಿತ್ರ ಮಾಧ್ಯಮದ `ಶಂಕರ್ಸ್ ವೀಕ್ಲಿ' ಪತ್ರಿಕೆ 27 ವರ್ಷಗಳ ಕಾಲ ಅಖಂಡ ಪ್ರಕಟಣೆ.

1




2




3




4




5




6




7




8




9




10




11




12




13




14




15




16




17




18




19




20




21




22




23



24




25




26




27




28




29




30




31




32




33




34




35




36




1. ಡಾ. ಕೈಲಾಶ್‌ನಾಥ್ ಕಾಟ್ಜೂ
2. ಬಿ.ಜಿ. ಖೇರ್ (ಬಾಳಾಸಾಹೇಬ್ ಗಂಗಾಧರ್ ಖೇರ್)
3. ಪಂಡಿತ ಗೋವಿಂದ್ ವಲ್ಲಭ ಪಂತ್
4. ಡಾ. ಅನುಗ್ರಹ ನಾರಾಯಣ ಸಿಂಗ್
5. ಎಸ್. ಸತ್ಯಮೂರ್ತಿ
6. ಸರತ್‌ಚಂದ್ರ ಬೋಸ್
7. ಕುಲಾಧರ್ ಚಲೀಹಾ
8. ಡಾ. ಶ್ರೀಕೃಷ್ಣ ಸಿನ್ಹಾ
9. ಟಿ. ರಾಮಸ್ವಾಮಿ ಚೌಧರಿ
10. ಎಸ್. ಡಿ. ಕಿಚ್ಲು
11. ಗೋಪಿನಾಥ ಬಾರ್ದೋಲಾಯಿ
12. ಶ್ಯಾಮ ಕೃಷ್ಣ ವರ್ಮ
13. ಅಸಫ್‌ಅಲಿ
14. ವಿಷ್ಣುರಾಮ ಮೇಧಿ
15. ಡಾ. ಪಿ. ಸುಬ್ಬರಾಯನ್
16. ರಾಮಚಂದ್ರ ಸುಖಾರಾಮ್ ರುಯಿಕರ್
17. ಛೋಟುರಾಮ್ (ಉರ್ಫ್ ರಾಮರಛ್‌ಪಾಲ)
18. ಜನನಾಯಕ ದೇಭೇಶ್ವರ ಶರ್ಮಾ
19. ಮಣ್ಣತ್ತೂರು ಪದ್ಮನಾಭನ್
20. ಪಂಡಿತ ರವಿಶಂಕರ್ ಶುಕ್ಲಾ
21. ಮೊಹಮ್ಮದ್ ಇಕ್ಬಾಲ್
22. ಲಕ್ಷ್ಮಿನಾಥ್ ಬೇಜ್‌ಬರುವಾ
23. ಶ್ರೀಪ್ರಕಾಶ್
24. ಡಾ. ಬಿ. ಆರ್. ಅಂಬೇಡ್ಕರ್
25. ಕನ್ಹಯ್ಯಲಾಲ ಮಾಣಿಕ್‌ಲಾಲ್ ಮುನ್ಷಿ
26. ಬೆನ್‌ಗಲ್ ನರಸಿಂಹ ರಾವ್
27. ಜಿತೇಂದ್ರ ಮೋಹನ್ ಸೇನ್‌ಗುಪ್ತ (ಪತ್ನಿನೆಲ್ಲಿಸೇನ್ ಗುಪ್ತ)
28. ಉತ್ಕಲಮಣಿ ಪಂಡಿತ ಗೋಪ ಬಂಧುದಾಸ್
29. ಚೌಧುರಿ ಚರಣ್‌ಸಿಂಗ್
30. ಆಚಾರ್ಯ ನರೇಂದ್ರದೇವ್
31. ಟಿ. ಪ್ರಕಾಶಂ
32. ವರಾಹಗಿರಿ ವೆಂಕಟಗಿರಿ
33. ಡಾ. ಹರಿಸಿಂಗ್ ಗೌರ್
34. ಫಕ್ರುದ್ದೀನ್ ಅಲಿ ಅಹ್ಮದ್
35. ಕೆ. ಶಂಕರ್ ಪಿಳ್ಳೆ (ವ್ಯಂಗ್ಯಚಿತ್ರ)
36. ಕೆ. ಶಂಕರ್ ಪಿಳ್ಳೆ (ವ್ಯಂಗ್ಯಚಿತ್ರ)

ಸಂಗ್ರಹ ವಿನಯ್ ಎಸ್.
ಆರ್. ಬಿ. ಪಿ. ಸಿಬ್ಬಂದಿ ನಿವಾಸ್
ಅಸ್ಸಾಯ್ ರಸ್ತೆ, ಅಲಸೂರು,
ಬೆಂಗಳೂರು560 042

ಚಿಲ್ಡ್ರನ್ಸ್ ಬುಕ್ ಟ್ರಸ್ಟ್ ಸ್ಥಾಪಿಸಿ, ಮಕ್ಕಳ ಸಾಹಿತ್ಯ ಪ್ರಕಟಣೆ ಅಂತರಾಷ್ಟ್ರೀಯ ಮಕ್ಕಳ ಚಿತ್ರ ಬರೆಯುವ ಸ್ಪರ್ಧೆ ಈಗಲೂ ಪ್ರಖ್ಯಾತ. ದೇಶದ ಪದ್ಮ ವಿಭೂಷಣ ಹಾಗೂ ಪೋಲೆಂಡ್, ಕೆನಾಡಾ, ಹಂಗೇರಿ ಜರ್ಮನಿಯಿಂದ ಪ್ರಶಸ್ತಿಗಳ ಸುರಿಮಳೆ ಬದುಕಿದ್ದು 87ವರ್ಷ.

### ಶ್ಯಾಮಾ ಪ್ರಸಾದ ಮುಖರ್ಜಿ

ಇಂಗ್ಲೆಂಡಿನಲ್ಲಿ ಕಾನೂನು ಅಧ್ಯಯನ. ಆದರೆ ಎಂದೂ ವಕೀಲಿ ವೃತ್ತಿ ಮಾಡಲಿಲ್ಲ. ಕಲ್ಕತ್ತಾ ವಿಶ್ವವಿದ್ಯಾಲಯದ ಅತಿ ಚಿಕ್ಕ ವಯಸ್ಸಿನ Vice-Chancellar ಆಗಿ ಸೇವೆ. ಭಾರತ ಸರ್ಕಾರದಲ್ಲಿ, ಗಾಂಧಿ, ಆಹ್ವಾನದ ಮೇರೆಗೆ ಶಾಮೀಲು. ನಂತರ ನೆಹರೂರವರೊಡನೆ ಭಿನ್ನಾಭಿಪ್ರಾಯ. ಹೊರ ಬಂದು -ಭಾರತೀಯ ಜನಸಂಘದ ಸ್ಥಾಪನೆ. 1953ರಲ್ಲಿ ಕಾಶ್ಮೀರವನ್ನು ಭಾರತದ ಸೇರ್ಪಡೆಗಾಗಿ, ಅಖಂಡ ಹೋರಾಟ ಮಾಡುವಾಗ ಬಂಧನ, ಆಗಲೇ ನಿಧನ. ಆಗ ಅವರಿ 52ವರ್ಷ ವಯಸ್ಸು.

### ಚೌಧುರಿ ಚರಣಸಿಂಗ್

ಉತ್ತರ ಪ್ರದೇಶದಲ್ಲಿ ಜನನ. ಆಗ್ರಾದಿಂದ ಕಾನೂನು ಪದವಿ. ಗಾಝಿಯಾಬಾದ್‌ನಲ್ಲಿ ವಕೀಲಿ ವೃತ್ತಿ. ಕ್ವಿಟ್ ಇಂಡಿಯಾ ಕಾಲದಲ್ಲಿ ಕ್ರಾಂತಿಕಾರಿಗಳ ಗುಪ್ತದಳ ಸಂಘಟನೆ. ಸ್ವಾತಂತ್ರ್ಯ ನಂತರ ಯು. ಪಿ.ಯಲ್ಲಿ ನ್ಯಾಯ ಸಚಿವರಾಗಿ "ಜಮೀಂದಾರಿ ಪದ್ಧತಿ ಉನ್ಮೂಲನ ವಿಧೇಯಕ" ರಚಿಸಿದರು. ಆಗಲೇ ಚಕ್‌ಬಂದಿ ಕಾನೂನು ಸಹ ಪಾಸಾಯಿತು. ಭಾರತೀಯ ಲೋಕದಳದಿಂದ ಗೆದ್ದು ಯು.ಪಿ. ಮುಖ್ಯಮಂತ್ರಿ. ತುರ್ತುಪರಿಸ್ಥಿತಿಯಲ್ಲಿ ಜೇಲುವಾಸ. ಜನತಾ ಪಕ್ಷದಲ್ಲಿ ತಮ್ಮ ಪಕ್ಷವಿಲೀನಗೊಳಿಸಿ, ಗೃಹ ಸಚಿವ, ಉಪಪ್ರಧಾನಿ, ಕೊನೆಗೆ ಈ ಮಣ್ಣಿನ ಮಗ ಪ್ರಧಾನ ಮಂತ್ರಿಯಾಗಿ ಸೇವೆ ಸಲ್ಲಿಸದರು. ಇವರು ಬದುಕಿದ್ದು 85ವರ್ಷ.

### ಫಕ್ರುದ್ದೀನ್ ಅಲಿ ಅಹ್ಮದ್

ಜನನ ದೆಹಲಿಯಲ್ಲಿ ಇಂಗ್ಲೆಂಡಿನಲ್ಲಿ ಕಾನೂನು ಅಧ್ಯಯನ. ಪಂಜಾಬ್ ಆಸ್ಸಾಂ ಹೈಕೋರ್ಟ್‌ನಲ್ಲಿ ವಕೀಲಿ ವೃತ್ತಿ. ನಂತರ ಅಸ್ಸಾಮಿನ ಅಡ್ವೋಕೇಟ್ ಜನರಲ್. ಸ್ವಾತಂತ್ರ್ಯನಂತರ ಔದ್ಯೋಗಿಕ ಮಂತ್ರಿಯಾಗಿ MRTP ACT ರಚನೆ. ರಷಿಯಾಕ್ಕೆ ವಕೀಲರ ನಿಯೋಗದ ಅಧ್ಯಕ್ಷ. ಐದನೇ ರಾಷ್ಟ್ರಪತಿಯಾಗಿ, ತುರ್ತು ಪರಿಸ್ಥಿತಿಯಲ್ಲಿ, ಕೇವಲ 3ವರ್ಷ ಕಾಲ ಆಳಿ, 72ನೇ ವಯಸ್ಸಿನಲ್ಲಿ ನಿಧನ.

### ಬ್ಯಾರಿಸ್ಟರ್ ನಾಥ ಪೈ

ಮಹಾರಾಷ್ಟ್ರದ ಕೋಂಕಣ ಪ್ರದೇಶದಲ್ಲಿ ಜನನ. ಪೋರ್ಚುಗೀಜ ಶಾಸನದಿಂದ ಗೋವಾ ಮುಕ್ತಿಗೆ ಹೋರಾಟ. ಅಂತರಾಷ್ಟ್ರೀಯ ಸಮಾಜವಾದಿ ಯುವಕ ಸಂಘದ ಅಧ್ಯಕ್ಷ. ಗೋವಾ, ಮಹಾರಾಷ್ಟ್ರ, ಕರ್ನಾಟಕಕ್ಕೆ ಸಂಪರ್ಕ ಕಲ್ಪಿಸುವ "ಕೊಂಕಣ್ ರೇಲ್ವೆ" ಇವರು ಕಂಡ ಕನಸು. ಈ ಸಮರ್ಪಿತ ಸಮಾಜವಾದಿ, ಜಾಗರೂಕ ಸಂಸದ್‌ಪಟು ಹೃದಯ ರೋಗದಿಂದ ನಿಧನರಾದಾಗ ಕೇವಲ 49 ವರ್ಷ ವಯಸ್ಸು.

ಹರಿಸಿಂಗ್ ಕೌರ್ : ಸಾಗರದಲ್ಲಿ ಜನನ. 18ನೇ ವಯಸ್ಸಿಗೆ ಇಂಗ್ಲೆಂಡಿನಲ್ಲಿ ಕಾನೂನು ಅಧ್ಯಯನ. ಮರಳಿ ರಾಯ್‌ಪುರದಲ್ಲಿ ವಕೀಲಿ. ಆಗ ರಚಿಸಿದ "The law of transfer of India" "The penal Law of British India" ಹಾಗೂ "Hindu Law code" ಇವರ ನ್ಯಾಯಶಾಸ್ತ್ರ ಪ್ರತಿಭೆಗೆ ಸಾಕ್ಷಿ. ಮಹಿಳೆಯರು ವಕೀಲರಾಗಿ ತಮ್ಮ ಹೆಸರು ನೊಂದಾಯಿಸುವ ಹಕ್ಕಿನ ಅಧಿನಿಯಮ ರಚಿಸಿದರು. ತಮ್ಮ ಸರ್ವಸ್ವವನ್ನು ದಾನಮಾಡಿ ಸಾಗರ್ ವಿಶ್ವವಿದ್ಯಾಲಯ ಸ್ಥಾಪಿಸಿ ಅದರ ವೈಸ್ ಛಾನ್ಸಲರ್ ಆಗಿದ್ದರು. ಇವರು ಬದುಕಿದ್ದು 79 ವರ್ಷ.

### ದುರ್ಗಾಬಾಯಿ ದೇಶ ಮುಖ್

ಆಂಧ್ರದಲ್ಲಿ ಜನನ. ಬಾಲ್ಯದಲ್ಲೇ ಗಾಂಧಿ ಪ್ರಭಾವ. ದೇವದಾಸಿ, ಬುರ್ಖಾ ಪದ್ಧತಿ ವಿರುದ್ಧ ಹೋರಾಟ. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಲಾಠಿ ಏಟು, ಜೇಲುವಾಸ. ನಂತರ B.L.ಡಿಗ್ರಿ ಗಳಿಕೆ. ಆಂಧ್ರ ಮಹಾ ಸಭಾ ಸ್ಥಾಪಿಸಿ ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಸೇವೆ. ಆಂಧ್ರ ಪರಿಹಾರ ಸಂಘದ ಅಧ್ಯಕ್ಷೆಯಾಗಿ ಅವರಿಗಾಗಿ ಶಾಲೆ ಸ್ಥಾಪನೆ. ಸಂಸದ್ ಸದಸ್ಯೆಯಾಗಿ ಮಹಿಳೆಯರ ಕಲ್ಯಾಣಕ್ಕಾಗಿ ಅನೇಕ ಶಾಸನಗಳ ರಚನೆ. 44ನೇ ವರ್ಷದಲ್ಲಿ ಡಾ। ಸಿ. ಡಿ. ದೇಶಮುಖರೊಡನೆ ವಿವಾಹ. ನೆಹರೂ ಸಾಕ್ಷರತಾ ಪುರಸ್ಕಾರ. ಯುನೆಸ್ಕೋ ಪುರಸ್ಕಾರ ಪದ್ಮವಿಭೂಷಣ ವಿಜೇತೆ ಬದುಕಿದ್ದು 72ವರ್ಷ.

### ರಫಿ ಅಹ್ಮದ್ ಕಿದ್‌ವಾಯಿ

ಉತ್ತರ ಪ್ರದೇಶದಲ್ಲಿ ಜನನ. ಚಿಕ್ಕಪ್ಪನ ಮನೆಯಲ್ಲಿ ಬೆಳೆಯುವಗಾಲೇ ಕಾಂಗ್ರೆಸಿನ ಪ್ರಭಾವ. ಮನಸ್ಸಿನಲ್ಲಿ ಕಾನೂನು ಪದವಿಗಳಿಸುವ ಯೋಚನೆ ಇದ್ದರೂ ಗಾಂಧೀಜಿಯವರ ಕರೆಗೆ ಓಗೊಟ್ಟು ಓದುವ ಯೋಜನೆ ಬಿಟ್ಟು ಅಸಹಕಾರ ಚಳುವಳಿಗೆ ಧುಮುಕಿದರು. ಇಂತಹ ತರುಣ ತ್ಯಾಗಮಯ ಇತಿಹಾಸದಲ್ಲಿ ಹುದುಗಿ ಹೋಗಿದ್ದು ಅದೆಷ್ಟೋ!

### ಕೆ. ಕೇಳಪ್ಪನ್

ಕೇರಳದಲ್ಲಿ ಜನನ. ಶಿಕ್ಷಕರಾಗಿ ವೃತ್ತಿ ಆರಂಭ. ಸಮಾಜ ಸೇವೆಯಲ್ಲಿ ಆಸಕ್ತಿ. "ನಾಯರ್ ಸರ್ವಿಸ್ ಸೊಸೈಟಿ" ಸ್ಥಾಪನೆ. ಮುಂಬೈನಲ್ಲಿ ಕಾನೂನು ಅಧ್ಯಯನ ಮಾಡಲು ಸೇರ್ಪಡೆ. ಆದರೆ ಗಾಂಧೀಜೀಯವರ ಕರೆಗೆ ಓ ಗೊಟ್ಟು, ಓದನ್ನ ಅರ್ಧಕ್ಕೆ ಬಿಟ್ಟು, ಮಾತೃಭೂಮಿಗಾಗಿ ದುಡಿತ. ಸರ್ವೋದಯ ಗಾಂಧೀ ಸಿದ್ಧಾಂತ ಕೇರಳದಲ್ಲಿ ಪ್ರಚಾರ ಮಾಡಿ, ಕೇರಳದ ಗಾಂಧಿಯೆಂದೇ ಖ್ಯಾತ. ಇದು ಇತಿಹಾಸದ ಇನ್ನೊಂದು ಘಟ.

### ವಿನಾಯಕ ದಾಮೋದರ್ ಸಾವರ್‌ಕರ್

ಮಹಾರಾಷ್ಟ್ರದಲ್ಲಿ ಜನನ. ಮುಂಬಯಿಯಲ್ಲಿ ಕಾನೂನು ಅಧ್ಯಯನ. ಲಂಡನ್ನಿಗೆ ಬ್ಯಾರಿಸ್ಟರ್ ಆಗಲು ಪಯಣ. ಅಲ್ಲಿ ಫ್ರಿ ಇಂಡಿಯಾ ಸೊಸೈಟಿ ಕ್ರಾಂತಿಕಾರಿ ಸಂಘ ಸ್ಥಾಪನೆ. ಕರ್ಜನ್‌ವಿಲ್ಲಿಯ ಹತ್ಯೆ ಮಾಡಿದ್ದು - ಮದನ್‌ಲಾಲ್ ಧಿಂಗ್ರ, ಆದರೆ ಸಾವರಕರ ಮೇಲೆ ಅನುಮಾನ, ಹೀಗಾಗಿ ಬ್ಯಾರಿಸ್ಟರ್ ಅಂತಿಮ ಪರೀಕ್ಷೆ ಪಾಸಾಗಿದ್ದರೂ, ರಾಜಕೀಯದಲ್ಲಿ ಇನ್ನು ಮುಂದೆ ಭಾಗವಹಿಸುವುದಿಲ್ಲ ಎಂದು ಮುಚ್ಚಳಿಕೆ ಬರೆದು ಕೊಡಲು ಶರತ್ತು. ಸಾವರಕರಿಂದ ನಕಾರ. ಮುಂದಿನ ಇವರ ಬದುಕು ಇತಿಹಾಸದ ಸ್ವರ್ಣಮಯ ಅಜರಾಮರ ಪುಟಗಳು.

### ಕೊನೆಯ ಮಾತು :

ರಾಜಕೀಯ ಸ್ವಾತಂತ್ರ್ಯ ಪಡೆದದ್ದು. ನಮ್ಮ ಮೊದಲ ಹಂತದ ಗುರಿ. ಆದರೆ ಈಗ ದೇಶದಲ್ಲಿನ ಸ್ಥಿತಿಗತಿಗಳನ್ನು ಗಮನಿಸಿದರೆ, ನ್ಯಾಯಾಂಗ ಮತ್ತೆ ಕಾಲನ ಕರೆಗೆ ಓಗೊಟ್ಟು ಎದ್ದು ನಿಲ್ಲಬೇಕಾಗಿದೆ.

ನಮ್ಮ ಮೇಲಿರುವ ಅತಿದೊಡ್ಡ ಜವಾಬ್ದಾರಿ, ಪ್ರಪಂಚದ ಅತಿದೊಡ್ಡ ಈ ಪ್ರಜಾಪ್ರಭುತ್ವವನ್ನು ಮಾನವ ಹಕ್ಕುಗಳನ್ನು ಕಾಯ್ದುಕೊಳ್ಳುವುದು.

ಮಹಿಳೆಯರಿಗೆ ಸಮಾನ ಅವಕಾಶ ನೀಡಿ, ಗೌರವದಿಂದ ಬದುಕಲು, ಶೋಷಣರಹಿತ ಸಮಾಜ ನಿರ್ವಹಿಸುವುದು

ದಲಿತರಿಗೆ, ಶೋಷಿತರಿಗೆ, ಸಮಾಜಿಕ ನ್ಯಾಯ ಒದಗಿಸಲು ಉಚಿತ ಕಾನೂನು ನೆರವು ಸಲ[illegible] ಒದಗಿಸುವುದು,

ಭಾವಿ ಜನಾಂಗಕ್ಕೆ ಉತ್ತಮ ಆಹಾರಸ, ಉಚಿತ ಹಾಗೂ ಕಡ್ಡಾಯ ಶಿಕ್ಷಣ, ಬಾಲಕಾರ್ಮಿಕ ಪದ್ಧತಿ ನಿವಾರಣೆ ಹಾಗೂ ಸರ್ವತೋಮುಖ ಬೆಳವಣಿಗೆ ಅವಕಾಶ ಒದಗಿಸುವುದು.

ಈ ದೇಶದ ಜಾತ್ಯಾತೀತ ಸ್ವರೂಪ ಉಳಿಸಿಕೊಂಡು, ರಾಷ್ಟ್ರೀಯ ಭಾವೈಕ್ಯತೆ ಕಾಪಾಡುವುದು.

ನಾವು ಈ ಎಲ್ಲಾ ಗುರಿಗಳನ್ನು ತಲುಪಿದಾಗಲೇ ನಮ್ಮ ಪೂರ್ವಜರ ತ್ಯಾಗ, ಬಲಿದಾನ, ಹೋರಾಟಕ್ಕೊಂದು ಅರ್ಥ ಸಾರ್ಥಕತೆ ಒದಗುವುದು.

ಈ ಸ್ವರ್ಣಮಯ ಕ್ಷಣಗಳಲ್ಲಿ, ಇದೇ ನಾವು ಅವರಿಗೆ ಸಲ್ಲಿಸುವ ನಿಜವಾದ ಶ್ರದ್ಧಾಂಜಲಿ.

# ಇದು ನಮ್ಮ ಪ್ರಾಚೀನ ಭಾರತ - 6

● ಎಸ್. ಎಸ್. ಆನಂದ ಶಾಸ್ತ್ರಿ, ಮೈಸೂರು

ಈಗ ನಂಬಲು ಅಸಾಧ್ಯವೆನಿಸುವಂತೆ ಭಗವಾನ್ ಬುದ್ಧನ ಪರಿನಿರ್ವಾಣದ 900 ವರ್ಷಗಳಲ್ಲೇ ಅಂದರೆ 1500 ವರ್ಷಗಳ ಹಿಂದೆ ಕ್ರಿಸ್ತಶಕ ಪ್ರಥಮ ಮೂರು ಶತಮಾನಗಳಲ್ಲೇ ಬೌದ್ಧ ಧರ್ಮವು ಮತ್ತು ಭಾರತದ ಸಂಸ್ಕೃತಿಯು ಮಧ್ಯ ಏಷಿಯಾದಲ್ಲೆಲ್ಲಾ ಹರಡಿ ಚೀನಾ ದೇಶದಲ್ಲೂ ತಳ ಊರಿತ್ತು. ಆ ಮಹತ್ವ ಕೆಲಸಕ್ಕೆ ಕಾಶ್ಮೀರದ ಕೊಡುಗೆ ಬಹಳ ಹಿರಿಯದು. ಆಗ ಕಾಶ್ಮೀರವು ಜ್ಞಾನ, ಧರ್ಮ ಮತ್ತು ಸಂಸ್ಕೃತಿಯ ಪೀಠವಾಗಿತ್ತು. ಕ್ರಿ.ಪೂ. ಆರನೇ ಶತಮಾನದಲ್ಲೇ ಚೆಗು ತುಂಬಿದ ಕಾಶ್ಮೀರ ಕಣಿವೆಯನ್ನು ತೋರಿಸುತ್ತಾ ಭಗವಾನ್ ಬುದ್ಧನು ತನ್ನ ಪ್ರಿಯ ಶಿಷ್ಯ ಆನಂದನಿಗೆ "ಇದು ವಿಶ್ವವಿಖ್ಯಾತ ಬೌದ್ಧ ಧರ್ಮದ ಬೀಡಾಗುವುದು" ಎಂದು ನುಡಿದಿದ್ದನೆಂದು ಪ್ರತೀತಿ. ಮಧ್ಯ ಏಷಿಯಾ ಮತ್ತು ಚೀನಾದಲ್ಲಿ ಮೊದಲು ಭಾರತದಿಂದ ಹೋದ, ಬೌದ್ಧ ಭಿಕ್ಷುಗಳು, ನಂತರ ಅಲ್ಲಿಯ ಬೌದ್ಧ ಭಿಕ್ಷುಗಳು. ತಾವೇ ಮತ ಪ್ರಚಾರದಲ್ಲಿ ತೊಡಗಿದ್ದರಿಂದ ಬೌದ್ಧ ಧರ್ಮವು ವಿಶಾಲವಾಗಿ ಬೆಳೆಯಿತು. ಅಂತಹವರಲ್ಲಿ ಕುಮಾರ ಜೀವ ಒಂದು ಅಸಮಾನ್ಯ ತಾರೆ. ಕುಮಾರ ಜೀವನ ತಂದೆ ಕುಮಾರಾಯಣ ಭಾರತದ ರಾಜ್ಯವೊಂದರ ವಂಶಪಾರಂಪರ್ಯವಾಗಿ ಬಂದ ಮಂತ್ರಿಗಳ ಸಂತಾನದವನು. ಆದರೆ ತನ್ನ ಹಕ್ಕನ್ನು ಬಿಟ್ಟುಕೊಟ್ಟು ಮಧ್ಯ ಏಷಿಯಾದ ಕುಚಿರಾಜ್ಯಕ್ಕೆ (ಈಗಿನ ಕುಚ) ಹೋಗಿ ರಾಜಗುರುವಾಗಿದ್ದು ಅಲ್ಲಿಯ ರಾಜಕುಮಾರಿ ಜೀವಾ ಅನ್ನು ಪ್ರೇಮಿಸಿ ಮದುವೆಯಾದ. ಅವರ ಮಗನೇ ಕುಮಾರ ಜೀವ.

ಮಗು ಎಳೆಯದಾಗಿದ್ದಾಗಲೇ ಜೀವಾ ಬೌದ್ಧ ಭಿಕ್ಷುಣಿಯಾದಳು. ಆದರೂ ತಾಯಿ ತನ್ನ ಮಗುವನ್ನು ಒಬ್ಬ ಅಸಾಮಾನ್ಯ ಪುರುಷನಾಗಿ ರೂಪಿಸಿದಳು. ಒಂಬತ್ತು ವರ್ಷದ ಕುಮಾರ ಜೀವನನ್ನು ಕರೆದುಕೊಂಡು ಅವನ ವಿದ್ಯಾಭ್ಯಾಸಕ್ಕಾಗಿ ಕಾಶ್ಮೀರದಲ್ಲಿ ಬೌದ್ಧ ಧರ್ಮದ ಬಹುಮಾನ್ಯ ಗುರು ಭಾನುದತ್ತನಲ್ಲಿ ಬಿಟ್ಟಳು. ವ್ಯಾಸಂಗದ ನಂತರ ತಾಯಿಯೊಡನೆ ಮಗ ಮಧ್ಯ ಏಷಿಯಾದ ಆಗಿನ ವಿವಿಧ ಪ್ರಸಿದ್ಧ ಧರ್ಮ ಸಂಸ್ಥೆಗಳಲ್ಲಿ ಅಭ್ಯಸಿಸಿ, ವಾಪಸ್ಸು ಕುಚಿರಾಜ್ಯಕ್ಕೆ ಬರುವ ಹೊತ್ತಿಗೆ ಪ್ರಖ್ಯಾತ ಪುರುಷನಾಗಿದ್ದ. ಈ ಮಧ್ಯೆ ಕುಚಿರಾಜ್ಯ ಪಶ್ಚಿಮ ರಾಜ್ಯಗಳಲ್ಲೊಂದರೊಡನೆ ಯುದ್ಧ ಮಾಡಿ ಸೋತಿತ್ತು. ಆಗಿನ ಕಾಲದ ಪದ್ಧತಿಯಂತೆ ಪ್ರಖ್ಯಾತ ಪಂಡಿತ ಕುಮಾರ ಜೀವನೂ ಚೀನಾದ ರಾಜಧಾನಿಗೆ ಒಯ್ಯಲ್ಪಟ್ಟ. ಸಂಸ್ಕೃತಿಕ ಮತ್ತು ಚೀನಿ ಭಾಷೆಗಳಲ್ಲಿ ಅದ್ವಿತೀಯ ಪಾಂಡಿತ್ಯವಿದ್ದ ಅವನಿಗೆ ನೂರಕ್ಕಿಂತ ಹೆಚ್ಚು ಸಂಸ್ಕೃತ ಗ್ರಂಥಗಳನ್ನು ಚೀನಿ ಭಾಷೆಗೆ ಭಾಷಾಂತರಿಸಿದ ದೊಡ್ಡ ಅನುಯಾಯಿಗಳ ಗುಂಪೇ ಇದ್ದು, ಚೀನಾ ದೇಶದಲ್ಲಿ ಮಹಾಯಾನ ಬೌದ್ಧ ಧರ್ಮವನ್ನು ಹರಡಿದ ಕೀರ್ತಿ ಅವನಿಗೆ ಸಲ್ಲಬೇಕು.

ಕ್ರಿ.ಶ. 4,5, 6, ನೇ ಶತಮಾನಗಳಲ್ಲಿ ಚೀನಾಕ್ಕೆ ಹೋದ ಬೌದ್ಧ ಪಂಡಿತರಲ್ಲಿ ಕಾಶ್ಮೀರದಿಂದ ಹೋದವರು ಭಾರತದ ಬಾಕಿ ಭಾಗಗಳಿಂದ ಹೋದವರಿಗಿಂತ ಹೆಚ್ಚಾಗಿದ್ದರು. ಆ ವಾಗ್ಮಿಗಳಲ್ಲಿ ಸಂಘಭೂತಿ, ಗೌತಮ ಸಂಘದೇವ, ಧರ್ಮಯಶ, ಪುಣ್ಯತ್ರಾತ, ವಿಮಲಾಕ್ಷ, ಬುದ್ಧದೇವ, ಧರ್ಮಮಿತ್ರ ಇತ್ಯಾದಿಗಳು ಚೀನಾ ದೇಶಕ್ಕೆ ಭೇಟಿ ಕೊಟ್ಟು ಚೀನೀ ಭಾಷೆಗೆ ಸಂಸ್ಕೃತದಿಂದ ತರ್ಜುಮೆ ಮಾಡಿ ಬೌದ್ಧ ಧರ್ಮವನ್ನು ಬೆಳೆಸಿ ಬಹಳ ಖ್ಯಾತಿ ತಂದರು. ಕುಮಾರ ಜೀವನ ಒಡನಾಡಿ ಬುದ್ಧಯಶನೆಂಬ ವಿದ್ವಾಂಸ ಈಗಿನ ಸಿಂಕಿಯಾಂಗ್‌ನ ಕಾಶ್‌ಘರ್ ನಗರದಲ್ಲಿ ನಡೆದ ಮೂರು ಸಾವಿರ ಬೌದ್ಧ ಭಿಕ್ಷುಗಳ ಸಮ್ಮೇಳನದಲ್ಲಿ ಭಾಗವಹಿಸಿದ್ದು ಅವನಿಂದ ಪ್ರಭಾವಿತನಾದ ಆ ರಾಜನಲ್ಲೇ ಹತ್ತಾರು ವರ್ಷ ಉಳಿದು ನಂತರ ಕುಚ್ ರಾಜ್ಯದ ಮುಖಾಂತರ ಚೀನಾಕ್ಕೆ ಹೋಗಿ ಕುಮಾರ ಜೀವನೊಡನೆ ಬೌದ್ಧ ಧರ್ಮವನ್ನು ಹರಡಿ ಕುಮಾರಜೀವನ ಮರಣಾನಂತರ ವಾಪಸ್ಸು ಕಾಶ್ಮೀರಕ್ಕೆ ಹೊರಟು ಹೋದನು. ರಾಜನಿಂದಲೂ ಸಹ ಉಡುಗೊರೆಯನ್ನು ನಿರಾಕರಿಸುವಷ್ಟು ನಿರಾಸಕ್ತಿ, ನಿಷ್ಠೆ ಆತನಲ್ಲಿತ್ತು.

ಗುಣವರ್ಮನು ಕಾಶ್ಮೀರದವನು. ರಾಜಕುಮಾರನಾಗಿದ್ದರೂ ರಾಜ್ಯವನ್ನು ಧಿಕ್ಕರಿಸಿ ಬೌದ್ಧ ಸನ್ಯಾಸಿಯಾದ. ಸಿಂಹಳಕ್ಕೆ ಹೋಗಿ ಅಲ್ಲಿಂದ ಈಗಿನ ಇಂಡೋನೇಶಿಯಾದ ಜಾವಾದ್ವೀಪಕ್ಕೆ ಹೋಗಿ ಅಲ್ಲಿಯ ರಾಜ ಮತ್ತು ರಾಜಮಾತೆಯನ್ನು ಬೌದ್ಧರನ್ನಾಗಿ ಮಾಡಿದ. ಜಾವಾದ್ವೀಪವನ್ನು ಶತ್ರುಗಳು ಆಕ್ರಮಿಸಿದಾಗ ಅಹಿಂಸೆಯನ್ನು ತೊರೆದು ವೀರನಾಗೆಂದು ರಾಜನಿಗೆ ಉಪದೇಶ ಮಾಡಿದನು. ರಾಜ ಗೆದ್ದದ್ದರಿಂದಲೂ ಗುಣವರ್ಮನ ಉಪದೇಶದಿಂದಲೂ ಬೌದ್ಧ ಧರ್ಮವು ದ್ವೀಪ ಪೂರ್ತಿ ಹರಡಿತು. ಚೀನಾದ ರಾಜಧಾನಿ ನಾನ್‌ಕಿಂಗ್ (Nanking)ನ ಬೌದ್ಧ ಭಿಕ್ಷುಗಳು ಗುಣವರ್ಮನನ್ನು ಕರೆಸಿಕೊಳ್ಳುವಂತೆ ರಾಜನಿಗೆ ಒತ್ತಾಯಿಸಿದರು. ಗುಣವರ್ಮನು ಚೀನಾ ತಲುಪಿ ರಾಜನನ್ನು ಬಹಳ ಪ್ರಭಾವಿತನಾಗಿ ಮಾಡಿದ. ಆ ಕಾಲದಲ್ಲಿ (5ನೇ ಶತಮಾನ) ನಾನ್ ಕಿಂಗ್‌ನಲ್ಲೂ ಭಾರತದ ಶ್ರಾವಸ್ತಿಯಲ್ಲಿದ್ದಂತೆ ಬುದ್ಧನ ವಿಹಾರದ ನಮೂನೆಯ ಜೇತವನ (Jetavana) ವಿಹಾರವಿತ್ತಂತೆ. ಒಂದು ವರ್ಷದೊಳಗೆ ಗುಣವರ್ಮನು ಅಲ್ಲೇ ಮರಣಹೊಂದಿದ. ಅಷ್ಟು ಸ್ವಲ್ಪ ಸಮಯದಲ್ಲೇ ಹನ್ನೊಂದು ಸಂಸ್ಕೃತ ಗ್ರಂಥಗಳನ್ನು ಭಾಷಾಂತರಿಸಿದ.

ಇಂತಹ ವಿದ್ವಾಂಸರ ಅನವರತ ಶ್ರಮದಿಂದಲೇ ಸಂಸ್ಕೃತದ ಗ್ರಂಥಗಳು ಬಾಕಿ ಭಾಷೆಗಳಿಗಿಂತ ಹೆಚ್ಚಾಗಿ ಚೀನಿ ಭಾಷೆಯಲ್ಲಿ ಭಾಷಾಂತರಿಸಲ್ಪಟ್ಟವು.

ಭಾರತದ ಮತ್ತಿತರ ಪ್ರಾಂತಗಳೂ ಬೌದ್ಧ ಧರ್ಮದ ಪ್ರಸಾರಣೆಗೆ ನೆರವು ನೀಡಿದವು. 5-6ನೇ ಶತಮಾನದಲ್ಲಿ ಮಧ್ಯದೇಶ (ಈಗಿನ ಮಧ್ಯಪ್ರದೇಶ) ದಿಂದ ಗುಣಭದ್ರ, ವಾರಣಾಸಿಯಿಂದ ಪ್ರಜ್ಞಾರುಚಿ, ಉಜ್ಜಯಿನಿಯಿಂದ ಉಪಶೂನ್ಯ, ಬಂಗಾಳದಿಂದ ಜ್ಞಾನಭದ್ರ, ಜಿನಯಶಸ್ ಮತ್ತು ಯಶೋಗುಪ್ತ ಮುಖ್ಯರಾದವರು. 4ನೇ ಶತಮಾನದಲ್ಲೇ ಈಗಿನ ಪಾಕಿಸ್ತಾನದ ವಾಯುವ್ಯ ಗಡಿ ಪ್ರಾಂತದಲ್ಲಿದ್ದ ಬುದ್ಧಭದ್ರ, ಚೀನಾ ದೇಶದಿಂದ ಧರ್ಮೋಪದೇಶದ ಆಮಂತ್ರಣವನ್ನು ಮನ್ನಿಸಿ ಅಲ್ಲಿ ಹೋಗಿ ಕುಮಾರ ಜೀವನೊಡನೆ ಧರ್ಮೋಪದೇಶ ಮಾಡಿದನು.

ನಾಲ್ಕನೇ ಶತಮಾನದಲ್ಲಿ ಮಧ್ಯದೇಶದ ಧರ್ಮಕ್ಷೇಮ ಮುನಿಯು ಕುಚಿರಾಜ್ಯದಲ್ಲಿದ್ದು ಪಶ್ಚಿಮ ಚೀನಾದ ರಾಜ್ಯವೊಂದರಲ್ಲಿದ್ದು ಬರಲು ಇಚ್ಛಿಸಿದಾಗ ಅವನು ಬೇರೆ ಕಡೆ ಹೋಗುವನೆಂಬ ಸಂಕುಚಿತ ಭಾವದಿಂದ ರಾಜನು ಅಪ್ಪಣೆ ಕೊಡಲಿಲ್ಲ. ಆದರೆ ಬುದ್ಧ ಭದ್ರನು ಹಠಹಿಡಿದಿದ್ದರಿಂದ ಆ ಹುಚ್ಚುದೊರೆ ಅವನನ್ನು ಕೊಲ್ಲಿಸಿಯೂ ಬಿಟ್ಟ. ಬೌದ್ಧ ಧರ್ಮ ಪ್ರಚಾರಣೆಯ ಒಂದು ಅಪೂರ್ವ ದುರಂತವಿದು. ಚೀನಾಕ್ಕೆ ಹೋದ ಬಹಳ ಬೌದ್ಧ ಸನ್ಯಾಸಿಗಳಲ್ಲಿ ಪರಮಾರ್ಥಮುನಿಯು ಮುಖ್ಯನಾದವನು. ಉಜ್ಜಯಿನಿಯಲ್ಲಿ ಹುಟ್ಟಿ ಪಾಟಲೀ ಪುತ್ರ (ಪಾಟ್ನಾ)ದಲ್ಲಿ ನೆಲಸಿದ್ದ ಈತ. ಐದನೇ ಶತಮಾನದಲ್ಲಿ ಚೀನಾದ (WU) 'ವು' ಚಕ್ರವರ್ತಿಯ ಬೇಡಿಕೆಯಂತೆ ಮಗಧ (ಈಗಿನ ಬಿಹಾರ್) ಗುಪ್ತರ ರಾಜ ವಿಷ್ಣುಗುಪ್ತನ ಅನುಮತಿಯಂತೆ ನೂರಾರು ಬೌದ್ಧ ಗ್ರಂಥಗಳನ್ನು ತೆಗೆದುಕೊಂಡು ಚೀನಾಕ್ಕೆ ಹೋದ. ಎಪ್ಪತ್ತು

ಗ್ರಂಥಗಳಿಗಿಂತ ಹೆಚ್ಚು ಗ್ರಂಥಗಳನ್ನು ಭಾಷಾಂತರಿಸಿ ಅಲ್ಲೇ ಮರಣ ಹೊಂದಿದ. ಅಲ್ಲೇ ಈತನ ಹೆಸರು ಚಿರಸ್ಥಾಯಿಯಾಯ್ತು. ಗುಜರಾತ (ಲಾಟದೇಶ) ದಲ್ಲಿ ಜನಿಸಿ ಕಾನ್ಯ ಕುಬ್ಜದ ಕೌಮುದೀ ಸಂಘಾರಾಮದಲ್ಲಿದ್ದ ಧರ್ಮಗುಪ್ತನು ಮಧ್ಯ ಏಷಿಯದ ದುರ್ಗಮ ಸ್ಥಾನಗಳಲ್ಲಿದ್ದು ಬೌದ್ಧಕ್ಷೇತ್ರಗಳಾಗಿದ್ದ ಕಪಿಶಾ (ಈಗಿನ ಕಾಫೀರಿಸ್ತಾನ), ಕುಚಿ, ಅಗ್ನಿದೇಶ (ಕರಾಶಹರ), ತೂರ್ಫನ್ ಮತ್ತು ಹಮಿ ಮುಖಾಂತರ ಚೀನಾ ತಲುಪಿದ. ಪ್ರಾಣಕ್ಕೆ ಪಣತೊಟ್ಟವರೇ ಹೋಗಬಹುದಾಗಿದ್ದ ಆ ದುರ್ಗಮ ದಾರಿಯಲ್ಲಿ ಹೋಗಿ ಚೀನಾ ತಲುಪಿದ. ಈ ಉತ್ಸಾಹಿ ಮುನಿ ಹ್ಯೂಯನ್‌ಸಾಂಗ್‌ನಂತೆ ಆದಾರಿಯ ಭೌಗೋಳಿಕ, ಸಾಮಾಜಿಕ, ಐತಿಹಾಸಿಕ ವಿಷಯಗಳನ್ನೆಲ್ಲಾ ವಿವರವಾಗಿ ಬರೆದಿದ್ದನಂತೆ. ಆದರೆ ಅದರ ಪ್ರತಿ ನಮಗೆ ಲಭ್ಯವಿಲ್ಲ. ಇದ್ದರೆ ನಮ್ಮಲ್ಲೂ ಒಬ್ಬ ಹ್ಯೂಯನ್ ಸಾಂಗ್ ಇದ್ದನೆಂದು ಹೆಮ್ಮೆ ಪಡಬಹುದಾಗಿತ್ತು.

ಇವರೆಲ್ಲರಿಗಿಂತಲೂ ಹೆಚ್ಚಿನ ಹೆಸರು ಪಡೆದ, ಚೀನಾದೇಶದಲ್ಲಿ ಬುದ್ಧನ ಪ್ರತಿರೂಪವೆಂದೇ, ಪವಾಡಪುರುಷನೆಂದೇ ಭಾವಿಸಲ್ಪಡುವ ವ್ಯಕ್ತಿ ಬೋಧಿಧರ್ಮ.

ಆರನೇ ಶತಮಾನದಲ್ಲಿ ಕಂಚಿಯ ರಾಜಕುಮಾರ ಪ್ರಾಯಶಃ ಪಲ್ಲವ ರಾಜಕುಮಾರನಾದ ಬೋಧಿಧರ್ಮ ಚೀನಾದಲ್ಲಿ (WU) ವು ಚಕ್ರವರ್ತಿಯಿಂದ ಸನ್ಮಾನಿತನಾಗಿದ್ದ. ಅದೇ ಕಾಲದಲ್ಲಿ ದಕ್ಷಿಣ ಭಾರತದ ಮತ್ತೊಬ್ಬ ಬೌದ್ಧ ಸನ್ಯಾಸಿ ವಿನೀತರುಚಿ ಬೌದ್ಧರ ಧ್ಯಾನ ಸಂಪ್ರದಾಯದ ಅಡಿಗಲ್ಲು ಹಾಕಿದ ಈಗ ಚೀನಾ, ಜಪಾನೀಯರಲ್ಲಿ ಬಹಳ ಜನಾನುರಾಗಿಯಾಗಿರುವ (ಜೆನ್) ಸಂಪ್ರದಾಯವೇ ಅದು.

ಕ್ರಿ.ಶ. 4, 5, 6ನೇ ಶತಮಾನಗಳಲ್ಲಿನ ಈ ಬೌದ್ಧ ಚಟುವಟಿಕೆಗಳಿಂದ ಚೀನಿಯರು ಮತ್ತು ಇತರರು ಬೌದ್ಧರಾಗಿದ್ದುದು ಒಂದೇ ಅಲ್ಲ. ಭಾರತದ ಸಂಸ್ಕೃತಿಯನ್ನು ಮತ್ತು ಬೌದ್ಧ ಮತವನ್ನು ಸ್ವತಃ ಮೂಲದಿಂದಲೇ ತಿಳಿಯುಲು ಕಲಿಯುಲು ಮತ್ತು ಭಾರತದ ಬೌದ್ಧ ಕ್ಷೇತ್ರಗಳನ್ನು ಮುಖತಃ ಸಂದರ್ಶಿಸಲು ಉತ್ಸಾಹಿಸಿತು.

ಹೀಗೆ ಗಂಗೆಯ ಪ್ರವಾಹ ವಿರುದ್ಧ ದಿಕ್ಕಿನಲ್ಲಿ ಹರಿಯಲು ಶುರುವಾಯಿತು. ಇದು ನಾಲ್ಕನೆಯ ಶತಮಾನದಿಂದಲೇ ಕಾಣಬರುತ್ತದೆ. ಚೀನೀ ವಿದ್ವಾಂಸ ತಾವೋಏನ್‌ಗನ್ (Taongan) ಇದಕ್ಕೆ ಮೊದಲನೇ ಉದಾಹರಣೆ. ಈತ ಸಂಸ್ಕೃತದಿಂದ ಚೀನಿ ಭಾಷೆಯಲ್ಲಿ ಭಾಷಾಂತರಿಸಿದ ಗ್ರಂಥಗಳನ್ನು ತಿದ್ದುವಷ್ಟು ಪರಿಣಿತನಾಗಿದ್ದು ತನ್ನ ಶಿಷ್ಯರನ್ನು ಚೀನಾ ದೇಶದ ಇತರ ಕಡೆ ಧರ್ಮ ಬೋಧನೆಗೆ ಕಳುಹಿಸುತ್ತಿದ್ದ. ಕುಚಿ ಇತ್ಯಾದಿ ಬೌದ್ಧ ದೇಶಗಳ ವಿದ್ವಾಂಸರೊಡನೆ ಸಂಬಂಧ ಬೆಳೆಸಿದ. ಭಾರತದ ವಿಷಯವಾಗಿ ಗ್ರಂಥವನ್ನು ಬರೆದು ಬೌದ್ಧ ಪುಣ್ಯಭೂಮಿ ಭಾರತವನ್ನು ಸಂದರ್ಶಿಸಲು ಉತ್ತೇಜಿಸುತ್ತಿದ್ದ. ಇದರ ಫಲವೇ ಕ್ರಿ.ಶ. 399ರಲ್ಲಿ ಫಾಹಿಯಾನ ಮತ್ತು ಅವನ ನಾಲ್ಕು ಸಂಗಡಿಗರು ಭಾರತಕ್ಕೆ ಭೇಟಿ ಕೊಟ್ಟದ್ದು ಅವರ ಜೊತೆಗೆ ಮತ್ತು ಐದು ಸನ್ಯಾಸಿಗಳು ಸೇರಿ ಭಾರತದ ಪರ್ಯಟನ ಮಾಡಿದರು. ಫಾಹಿಯಾನನ ದಿನಚರಿ ನಮಗೇ ಅರಿವಿಲ್ಲದ ವಿಷಯಗಳನ್ನು ತಿಳಿಸುತ್ತದೆ. ಭಯಂಕರ ಮರಳುಗಾಡನ್ನು ದಾಟಿ ಬಂದು ಭಾರತವನ್ನು ತಲುಪಿ ಮತ್ತು ಚೀನಾಕ್ಕೆ ವಾಪಸಾದ ಕೆಲವೇ ಮಂದಿಗಳಲ್ಲಿ ಫಾಹಿಯಾನ, ಹ್ಯೂಯನತ್‌ಸಾಂಗ ಇತ್ಸಿಂಗ್ ನಂತಹವರು ಬೆರಳೆಣಿಕೆಯಲ್ಲಿ ಮಾತ್ರ. ಚೀನಿ ಬೌದ್ಧ ಸಾಹಿತ್ಯದಲ್ಲಿ 4-5ನೇ ಶತಮಾನಗಳಲ್ಲಿ ಭಾರತವನ್ನು ಸಂದರ್ಶಿಸಿ ಬಂದ ಸನ್ಯಾಸಿಗಳ ವಿದ್ವಾಂಸರ ಕೆಲವು ಹೆಸರುಗಳು, ಕೇವಲ ಹೆಸರುಗಳು, ಸಿಗುತ್ತವೆ. ರಾಜರುಗಳು ಚಕ್ರವರ್ತಿಗಳು ತಾವೋ ಏನ್‌ಗನ್‌ನ ಉತ್ಸಾಹದಲ್ಲಿ ಭಾಗಿಯಾಗಿ ತಾವೂ ವಿದ್ವಾಂಸರನ್ನು ಕರೆಯುವುದು, ಕಳಿಸುವುದು ಮಾಡಿದರು. ಒಳಗೆ ಹೋದರೆ ಹೊರಗೆ ಬರಲಾಗದಂತಹ ಶಾಪಗ್ರಸ್ತ ಟಕಲಿಮಕನ್, ಆ ನಿರ್ಬಿಡ ಗೋಬಿ ಮರುಭೂಮಿಯಲ್ಲೂ ವ್ಯಾಪಾರಗಾರರಂತೆ ವಿದ್ವಾಂಸರೂ ಸನ್ಯಾಸಿಗಳೂ ಉತ್ಸಾಹಿತರಾಗಿರೂ ಹೋಗಿ ಬರುತ್ತಿದ್ದರೆಂದರೆ ಧರ್ಮಕ್ಕೆ ಇರುವ ಶಕ್ತಿಯನ್ನ ಊಹಿಸಿ!

### ಅಭಿಜ್ಞಾ ಪ್ರಕಾಶನದ ಶ್ರೀಮತಿ ಸುಶೀಲಾ ಎಸ್. ಶೆಟ್ಟಿ ಸ್ಮಾರಕ
### ಕಥಾ ಪ್ರಶಸ್ತಿ ಮತ್ತು ಕವಿತಾ ಪ್ರಶಸ್ತಿ

ಮುಂಬಯಿ ಸಾಹಿತ್ಯಿಕ, ಸಾಂಸ್ಕೃತಿಕ, ಸಾಂಘಿಕ ಚಟುವಟಿಕೆಗಳಲ್ಲಿ ಸದಾ ಕ್ರಿಯಾಶೀಲರಾಗಿದ್ದು, ಮುಂಬಯಿಯ ಕನ್ನಡ ಸಾಹಿತ್ಯಲೋಕ ಬಹಳಷ್ಟನ್ನು ನಿರೀಕ್ಷಿಸುತ್ತಿದ್ದಾಗಲೇ ಇಹದ ಯಾತ್ರೆಯನ್ನು ಮುಗಿಸಿದ ಶ್ರೀಮತಿ ಸುಶೀಲಾ ಎಸ್. ಶೆಟ್ಟಿಯವರ ಸ್ಮರಣಾರ್ಥ ಕಥೆ ಹಾಗೂ ಕವಿತಾ ಸ್ಪರ್ಧೆಗಳನ್ನು ಈ ವರ್ಷದಿಂದ ಆರಂಭಿಸಲಾಗಿದೆ. ಕನ್ನಡದ ಸಮಸ್ತ ಮಹಿಳೆಯರಿಗಾಗಿ ಆಯೋಜಿಸಲಾಗಿರುವ ಅಖಿಲ ಭಾರತ ಮಟ್ಟದ ಈ ಸ್ಪರ್ಧೆಯು ಎರಡು ವಿಭಾಗಗಳಲ್ಲೂ ಪ್ರತ್ಯೇಕವಾಗಿ ರೂ. ಮೂರು ಸಾವಿರ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರಗಳನ್ನೊಳಗೊಂಡಿದೆ.

ಸ್ಪರ್ಧೆಯ ನಿಯಮಗಳು :-

೧. ಈ ಸ್ಪರ್ಧೆ ಸಮಸ್ತ ಕನ್ನಡ ಮಹಿಳೆಯರಿಗಾಗಿ.
೨. ಅಪ್ರಕಟಿತ ಹಾಗೂ ಸ್ವರಚಿತ ಕಥೆ, ಕವಿತೆಗಳಾಗಿರಬೇಕು.
೩. ಸ್ಪರ್ಧೆಗಳಲ್ಲಿ ಭಾಗವಹಿಸುವವರು ಕಥಾ ಪ್ರಶಸ್ತಿಗೆ 1ಕಥೆ, ಕವಿತಾ ಪ್ರಶಸ್ತಿಗೆ 5ಕವಿತೆಗಳನ್ನು ಕಳುಹಿಸಬೇಕು. ಒಬ್ಬರು ಎರಡೂ ಸ್ಪರ್ಧೆಗಳಲ್ಲೂ ಭಾಗವಹಿಸಬಹುದು.
೪. ಹಸ್ತ ಪ್ರತಿಯಲ್ಲಿ ಹೆಸರು ನಮೂದಿಸಬಾರದು: ಹೆಸರು, ವಿಳಾಸ, ಪರಿಚಯ ಹಸ್ತಪ್ರತಿಯ ಜೊತೆಗೆ ಪ್ರತ್ಯೇಕವಾಗಿರಲಿ.
೫. ಪ್ರವೇಶ ಶುಲ್ಕವಿಲ್ಲ.
೬. ಕಥೆ, ಕವಿತೆಗಳನ್ನು ಹಾಳೆಯ ಒಂದೇ ಮಗ್ಗುಲಲ್ಲಿ ಸ್ಫುಟವಾಗಿ ಬರೆದಿರಬೇಕು/ಟೈಪು ಮಾಡಿರಬೇಕು. ಕಾರ್ಬನ್ ಪ್ರತಿ, ಝೆರಾಕ್ಸ್ ಪ್ರತಿ ಸ್ವೀಕರಿಸಲಾಗುವುದಿಲ್ಲ.
೭. ಕಥೆ : 12ರಿಂದ 16ಪುಟಗಳ ಮಿತಿಯಿರಲಿ.
೮. ಕವಿತೆ :ನೀಂಡಕಾವ್ಯ, ಅಥವಾ ಚುಟುಕು /ಮಿನಿ ಕವಿತೆಗಳಾಗಿರಬಾರದು.
೯. ಅನಾವಶ್ಯಕ ಪತ್ರವ್ಯವಹಾರಕ್ಕೆ ಅವಕಾಶವಿಲ್ಲ; ನಿರ್ಣಾಯಕರ ತೀರ್ಮಾನವೇ ಅಂತಿಮ.
೧೦. ಸ್ಪರ್ಧೆಗೆ ಬಂದ ಕೃತಿಗಳನ್ನು ಹಿಂತಿರುಗಿಸಲಾಗುವುದಿಲ್ಲ.
೧೧. ಪ್ರಶಸ್ತಿ ಪಡೆದ ಕಥೆ, ಕವಿತೆಗಳನ್ನು ಹಾಗೂ ತೀರ್ಪುಗಾರರ ಮೆಚ್ಚುಗೆ ಪಡೆದ ಕೃತಿಗಳನ್ನು ಒಟ್ಟು ಸೇರಿಸಿ ಮುಂದಿನ ವರ್ಷದ ಪ್ರದಾನ ಸಮಾರಂಭದಂದು ಸಂಕಲನ ರೂಪದಲ್ಲಿ ಪ್ರಕಟಿಸಲಾಗುವುದು.
೧೨. ಪ್ರಶಸ್ತಿ ಪ್ರದಾನ ಸಮಾರಂಭ ಪ್ರತಿ ವರ್ಷ ನವಂಬರ್ ತಿಂಗಳಲ್ಲಿ ಜರಗುವುದು.
೧೩. ಸ್ಪರ್ಧೆಯ ಬಗ್ಗೆ ಯಾವುದೇ ತೀರ್ಮಾನವನ್ನು ಕೈಗೊಳ್ಳುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿದೆ.
೧೪. ಕೃತಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : ಅಕ್ಟೋಬರ್ 30, 1997
೧೫. ಕೃತಿಗಳನ್ನು ಈ ಕೆಳಗಿನ ವಿಳಾಸಕ್ಕೆ, ವಿಳಾಸವನ್ನು ಇಂಗ್ಲಿಷ್‌ನಲ್ಲಿ ಬರೆದು ಕಳುಹಿಸಬೇಕು.

**Prof. Seethram R. Shetty**
Abhijin Prakashana,
216, Hiranandani Ind. Estate,
Kanjurmarg (W),
Mumbai-400 078.
Tel. / Fax : 5783061 / 5679727

# ಸಂಮೋಹಿನಿ ಚಿಕಿತ್ಸೆ - 18

● ಡಾ| ಉಷಾರಾವ್

ಬಿಕ್ಕಲು ವ್ಯಾಧಿಗೆ ಸಂಮೋಹಿನಿ ಚಿಕಿತ್ಸೆ

ಬಿಕ್ಕಲು, ಉಗ್ಗು, ತಡೆತಡೆದು ಮಾತನಾಡುವುದು ಇವೆಲ್ಲ ಒಂದೇ ವ್ಯಾಧಿಯ ಬೇರೆ ಬೇರೆ ಹೆಸರುಗಳು.

ಹಿಂದಿನ ಲೇಖನದಲ್ಲಿ ತಿಳಿಸಿದಂತೆ, ಬಿಕ್ಕಲು ವ್ಯಾಧಿ ಹಾಗೂ ಅದನ್ನು ಗುಣಪಡಿಸುವ ಬಗೆಗೆ ಈಗ ವಿವರವಾಗಿ ಚರ್ಚಿಸೋಣ.

ಈ ವ್ಯಾಧಿಗೆ ಅತ್ಯಂತ ಸಾಮಾನ್ಯ ಕಾರಣಗಳಲ್ಲೊಂದು ಎಂದು ಮಕ್ಕಳು ಹಾಗೂ ವಯಸ್ಕರಲ್ಲಿ ಅಗತ್ಯಕ್ಕಿಂತ ಹೆಚ್ಚಾಗಿರುವ ಮಾನಸಿಕ ಶಕ್ತಿ. ತ್ವರಿತವಾಗಿ ಗ್ರಹಿಸಬಲ್ಲ ಮನಶ್ಶಕ್ತಿಯುಳ್ಳ ಮಕ್ಕಳ ವಿಷಯದಲ್ಲಿ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ಹೆಚ್ಚು ಶ್ರಮ ವಹಿಸುವ ಅಗತ್ಯವಿಲ್ಲ ಎಂದು ಅನೇಕ ಸಂದರ್ಭಗಳಲ್ಲಿ ಅಭಿಪ್ರಾಯ ವ್ಯಕ್ತಪಡಿಸಲಾಗಿದೆ. ಆದರೆ ಎಲ್ಲ ಸಂದರ್ಭಗಳಲ್ಲೂ ಇದು ಸರಿಯಲ್ಲ.

ಏಕೆಂದರೆ ಮನಸ್ಸು ಎಷ್ಟು ತ್ವರಿತ ಶಕ್ತಿಯುಳ್ಳದ್ದೋ ಅಷ್ಟು ಹೆಚ್ಚಾಗಿ ಈ ಶಕ್ತಿಯ ಉಪಯೋಗವಾಗಬೇಕು. ಅಂದ ಮಾತ್ರಕ್ಕೆ ಮಗುವಿಗೆ ಸದಾ ಓದಲು, ಬರೆಯಲು ಅಥವಾ ಎಣಿಸಲು ಒತ್ತಾಯಮಾಡಬೇಕು ಎಂದು ಅರ್ಥವಲ್ಲ. ಆದರೆ ಆ ಮಗು ಇಷ್ಟಪಡುವ ಮಟ್ಟಿಗೆ ಕಾರ್ಯನಿರ್ವಹಿಸಲು ಪ್ರೋತ್ಸಾಹಿಸಬೇಕು. ಬುದ್ಧಿವಂತ ಮಕ್ಕಳು ಸಾಮಾನ್ಯವಾಗಿ ತಾವೇ ಓದುವುದನ್ನು ಕಲಿಯಲು ಇಷ್ಟಪಡುತ್ತವೆ, ವಿವಿಧ ಬಗೆಯ ಚಟುವಟಿಕೆಗಳಲ್ಲಿ ಆಸಕ್ತಿ ಹೊಂದಿರುತ್ತವೆ. ಆದುದರಿಂದ ಅವರಿಗೆ ಎಲ್ಲ ಅವಕಾಶಗಳನ್ನು ಹಾಗೂ ಪ್ರೋತ್ಸಾಹವನ್ನು ನೀಡದಿರುವುದು ತಪ್ಪಾಗುತ್ತದೆ. ವಾಸ್ತವವಾಗಿ ಮಿದುಳಿನಲ್ಲಿರುವ ಕೋಶಗಳ ಬಳಕೆಯಿಂದ ಹೆಚ್ಚುವರಿ ಶಕ್ತಿಯ ವ್ಯಯವಾಗುತ್ತದೆ. ಈ ಶಕ್ತಿಯನ್ನು ಉಪಯುಕ್ತ ರೀತಿಯಲ್ಲಿ ಬಳಸದಿದ್ದಲ್ಲಿ ಅದಕ್ಕೆ ಹೊರಹೋಗಲು ಸೂಕ್ತ ಮಾರ್ಗವಿಲ್ಲದೆ ಮಾನಸಿಕ ಒತ್ತಡ ಉಂಟಾಗುತ್ತದೆ. ಅದು ಕ್ರಮೇಣ ಕಾತರಕ್ಕೆ ಹಾದಿ ಮಾಡುತ್ತದೆ. ಈ ಹಂತದಲ್ಲೇ ಮಗುವಿನ ಮನಸ್ಸಿನಲ್ಲಿರುವ ಸಹಜವಾದ ಹೆದರಿಕೆಗಳು ಉದ್ದೀಪನಗೊಳ್ಳುತ್ತವೆ. ಈ ಮೂಲ ತತ್ವಗಳನ್ನು ಸರಿಯಾಗಿ ತಿಳಿದುಕೊಳ್ಳದಿದ್ದಲ್ಲಿ ಇಂಥ ಮಕ್ಕಳಿಗೆ ಚಿಕಿತ್ಸೆ ಮಾಡುವುದು ಕಷ್ಟವಾಗುತ್ತದೆ. ಒಂದಲ್ಲ ಒಂದು ಬಗೆಯ ಒತ್ತಡದಿಂದಾಗಿ ಮಕ್ಕಳಲ್ಲಿ ವರ್ತನೆ ಹಾಗೂ ವ್ಯಕ್ತಿತ್ವಕ್ಕೆ ಸಂಬಂಧಿಸಿದಂತೆ ನಾನಾ ಸಮಸ್ಯೆಗಳು ಹೆಚ್ಚಿನ ಪ್ರಮಾಣದಲ್ಲಿ ಉಂಟಾಗುತ್ತವೆ.

ಬಿಕ್ಕಲು ಅಥವಾ ಉಗ್ಗುವಿಕೆ ಭಾಗಶಃ ಉದ್ವೇಗದ ಒಂದು ಚಿಹ್ನೆ. ಇನ್ನು ಕೆಲವು ಸಂದರ್ಭಗಳಲ್ಲಿ ಇದಕ್ಕೆ ನರಗಳಿಗೆ ಸಂಬಂಧಿಸಿದ ತೊಂದರೆಗಳೂ ಕಾರಣವಾಗುತ್ತವೆ. ಪದಗಳ ಬಳಕೆಗೆ ವಿಶೇಷ ಸಹಾಯಕವಾದ ಮುಖ್ಯ ಮಿದುಳಿನ ಕೇಂದ್ರಗಳು ಒಂದೇ ಭಾಗದಲ್ಲಿಲ್ಲದಿದ್ದರೆ ಆಗ ಮಾತಾಡುವಲ್ಲಿ ಅಡಚಣೆ ಉಂಟಾಗುತ್ತದೆ. ಪ್ರತಿ 10 ಮಂದಿಯ ಪೈಕಿ 9 ಮಂದಿಯಲ್ಲಿ ಈ ಕೇಂದ್ರಗಳು ಒಂದೇ ಭಾಗದಲ್ಲಿರುತ್ತವೆ. ಉಳಿದ ಒಬ್ಬ ವ್ಯಕ್ತಿಯಲ್ಲಿ ಕೆಲವು ಮಿದುಳಿನ ಒಂದು ಭಾಗದಲ್ಲಿದ್ದರೆ ಉಳಿದವು ಇನ್ನೊಂದು ಭಾಗದಲ್ಲಿರುತ್ತವೆ. ಇದು ಆ ಜನ್ಮವಾಗಿ ಬರುವ ವ್ಯವಸ್ಥೆ, ಹಾಗೂ ಇದು ಪದಗಳ ಧ್ವನಿ ಮಾಡುವುದರೊಂದಿಗೆ ಸೇರಿ ಉಚ್ಚಾರಣೆ ಮತ್ತು ಓದುವುದರಲ್ಲಿ ಗಲಿಬಿಲಿ ಉಂಟುಮಾಡಬಹುದು. ಮಾತಿಗೆ ಸಂಬಂಧಿಸಿದಂತೆ ದಿಗ್ಭ್ರಮೆ ಹಾಗೂ ಕೆಲವು ಸಂದರ್ಭಗಳಲ್ಲಿ ವಿಚಾರಲಹರಿಯಲ್ಲಿ ಅಡೆತಡೆ ಉಂಟುಮಾಡಬಹುದು. ಇಂಥ ಚಿಹ್ನೆಗಳು ಯಾವುದೇ ಸಂಯೋಜನೆಯಲ್ಲಿ ಇರಬಹುದು. ಏನೇ ಆದರೂ ಮಾತಿಗೆ ಸಂಬಂಧಿಸಿದ ಎಲ್ಲ ಬಗೆಯ ತೊಂದರೆಗಳೂ ಮಿದುಳಿನ ಒಂದೇ ಕೇಂದ್ರದಲ್ಲಿ ಉಂಟಾಗುವುದಿಲ್ಲ ಎಂಬುದನ್ನು ಗಮನಿಸಬೇಕು. ಕೆಲವು ಸಂದರ್ಭಗಳಲ್ಲಿ ಮಗುವಿಗೆ ತೊದಲದೆ ಓದಲು ಸಾಧ್ಯವಾಗಬಹುದು ಅಥವಾ ಕೆಲವು ಅಧ್ಯಾಯಗಳನ್ನು ನಿರರ್ಗಳವಾಗಿ ಹೇಳಬಹುದು. ಆದರೆ ಸ್ವತಂತ್ರವಾಗಿ ಮಾತನಾಡುವಾಗ ಅದು ತೊದಲಬಹುದು. ಆದುದರಿಂದ ಉಗ್ಗುವಿಕೆ ಅಂಥ ನರಗಳಿಗೆ ಸಂಬಂಧಿಸಿದ ಆಧಾರವಿರುವಾಗ ಉದ್ವೇಗವು ಅದರ ಪರಿಣಾಮವನ್ನು ಅಧಿಕಗೊಳಿಸಬಹುದು. ಈ ಕಾರಣವನ್ನು ನಿವಾರಿಸಿದರೆ ಮಾತನಾಡುವುದು ಸುಲಭ ಹಾಗೂ ನಿರರ್ಗಳವಾಗಬಹುದು. ಆದುದರಿಂದ ಚಿಕಿತ್ಸೆಯು ವ್ಯಾಧಿಯ ಮೂಲಕಾರಣವನ್ನು ನಿವಾರಿಸುವತ್ತ ನಿರ್ದೇಶಿತವಾಗಿರಬೇಕು. ಇಲ್ಲಿಯೇ ಸಂಮೋಹಿನಿ ತಂತ್ರ ಸಹಾಯಕ್ಕೆ ಬರುತ್ತದೆ. ಕೆಲವು ಸಂದರ್ಭಗಳಲ್ಲಿ ನೇರ ಸೂಚನೆ ಸ್ವಪ್ರಜ್ಞೆಯನ್ನು ಕಡಿಮೆ ಮಾಡಲು ಸಹಾಯ ಮಾಡಬಹುದು. ಆದರೆ ಅದನ್ನು ಬಹಳ ಎಚ್ಚರಿಕೆಯಿಂದ ಬಳಸಬೇಕು.

**ರಮೇಶನ ಪ್ರಕರಣ**

ರಮೇಶ್ ತನ್ನ ತಂದೆಗೆ ವರ್ಗವಾದ ಕಾರಣ ಬೇರೆ ಶಾಲೆಗೆ ಹೊಸದಾಗಿ ಸೇರಿಕೊಂಡಿದ್ದ. ಅವನು ನಿಜವಾಗಿ ತೊದಲಲಾರಂಭಿಸಿದಾಗ ಅದು ಯಾರ ಗಮನಕ್ಕೂ ಬರಲಿಲ್ಲ. ಆದರೆ ಅದು ತೀವ್ರವಾದಾಗ ಅವನ ಕುಟುಂಬ ವೈದ್ಯರು ಸಂಮೋಹಿನಿ ತಂತ್ರದ ಮೂಲಕ ಚಿಕಿತ್ಸೆಗಾಗಿ ಅವನನ್ನು ನನ್ನ ಬಳಿಗೆ ಕಳುಹಿಸಿದರು.

ಪ್ರಾರಂಭದಲ್ಲಿ ರಮೇಶ್ ಆರಾಮವಾಗಿ (ರಿಲಾಕ್ಸ್) ಇರುವಂತೆ ತೋರಿತು ಹಾಗೂ ಕೆಲವು ಸಮಯಗಳಲ್ಲಿ ಸಾಧಾರಣ ನಿದ್ರೆ ಬರುವ ಪ್ರವೃತ್ತಿ ಅವನಲ್ಲಿತ್ತು. ನಿದ್ರೆಯಲ್ಲಿರುವಾಗಲೂ ಅವನು ಸೂಚನೆಗಳಿಗೆ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಿದ್ದ. ಕೆಲವು ಸಮಯಗಳಲ್ಲಿ ರಮೇಶ್ ಸಂಮೋಹಿನಿಗೆ ಒಳಗಾಗಿರುವಂತೆ ನಟನೆ ಮಾಡುತ್ತಿದ್ದ. ಆದರೆ ವಾಸ್ತವವಾಗಿ ಅವನು ತೂಕಡಿಸುತ್ತಿದ್ದ ಅವನ ಮನಸ್ಸು ಎಲ್ಲೋ ಅಲೆದಾಡುತ್ತಿತ್ತು.

ರಮೇಶ ಬುದ್ಧಿವಂತ ಹುಡುಗ. ಈ ಮಾತನ್ನು ಅವನಿಗೆ ನಿರ್ದಿಷ್ಟವಾಗಿ ಹೇಳಿದಾಗ ಅವನು ಚಿಕಿತ್ಸೆಯನ್ನು ಗಂಭೀರವಾಗಿ ತೆಗೆದುಕೊಳ್ಳಲಾರಂಭಿಸಿದ. ಏಳು ಅಭ್ಯಾಸಾಧಿವೇಶನಗಳ ವರೆಗೆ ಮಾತ್ರ ಚಿಕಿತ್ಸೆ ಸಾಗಿತು, ಏಕೆಂದರೆ ಅವನ ಸ್ಕೂಲ್‌ನಲ್ಲಿ ಯೂನಿಟ್ ಟೆಸ್ಟ್ ಇದ್ದುದರಿಂದ ಮುಂದುವರಿಯುವಿಕೆಗೆ ಅಡಚಣೆ ಉಂಟಾಯಿತು. ಆದರೆ ಹತ್ತು ದಿನಗಳ ನಂತರ ಅವನು ನನ್ನಲ್ಲಿಗೆ ಹಿಂದಿರುಗಿ ಬಂದಾಗ ನನಗೆ ಆಶ್ಚರ್ಯವಾಯಿತು. ರಮೇಶ್ ಈಗ ಬಹಳ ಮಾತಾಡುತ್ತಿರುವುದಾಗಿಯೂ ಮತ್ತು ಬಹಳ ಚೆನ್ನಾಗಿ ಮಾತಾಡುತ್ತಿರುವುದಾಗಿಯೂ ಅವನ ತಾಯಿ ವರದಿ ಮಾಡಿದರು.

ಆ ನಂತರ, ಬಹುತೇಕ ಎಲ್ಲ ಅಭ್ಯಾಸಾಧಿವೇಶನಗಳ ಸಮಯದಲ್ಲಿ ರಮೇಶ ನನ್ನೊಂದಿಗೆ ಹೆಚ್ಚು ಸರಾಗವಾಗಿ ಮಾತನಾಡುತ್ತಿದ್ದ. ಆದುದರಿಂದ ಅವನ ತಾಯಿಯೊಂದಿಗೆ ಸಮಾಲೋಚಿಸಿ, ದೀರ್ಘ ಚಿಕಿತ್ಸೆಯನ್ನಾರಂಭಿಸಲು ಯೋಚಿಸಿದೆ. ಈ ಸಮಯದಲ್ಲೇ, ರಮೇಶ್ ತನಗೆ ಬೇರೆ ಯಾವ ಹುಡುಗರಲ್ಲಾಗಲೀ, ಯಾವುದೇ ಆಟಗಳಲ್ಲಾಗಲೀ ಆಸಕ್ತಿಯಿಲ್ಲ ಎಂದು ಹೇಳಿದ, ನನಗೆ ಅಗ್ಯವಾಗಿದ್ದ ಮುಖ್ಯ ಸಂಗತಿ ಎಂದರೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅವನಿಗಿದ್ದ ಹೆದರಿಕೆ ದೂರವಾದುದು.

ಹನ್ನೊಂದು ಅಭ್ಯಾಸಾಧಿವೇಶನಗಳ ನಂತರ ನಾನು ಚಿಕಿತ್ಸೆಯನ್ನು ನಿಲ್ಲಿಸಿದೆ, ಅಷ್ಟು ಹೊತ್ತಿಗೆ

ಅವನಲ್ಲಿ ಬಹಳ ಸುಧಾರಣೆಯಾಗಿತ್ತು. ಅಲ್ಲದೆ ಅವನ ತಾಯಿಯೊಂದಿಗೆ ಮಾತಾಡಿದ ನಂತರ ರಮೇಶ್ ಎಲ್ಲ ವಯಸ್ಸಿನ ಜನರೊಂದಿಗೆ ಉತ್ತಮ ಸಂಬಂಧಗಳನ್ನು ಬೆಳೆಸಿಕೊಂಡಿರುವನೆಂದೂ ವಿದ್ಯಾಭ್ಯಾಸದಲ್ಲೂ ಪ್ರಗತಿ ಸಾಧಿಸುತ್ತಿರುವನೆಂದೂ ಅವನ ವ್ಯಾಧಿಯ ಬಹುತೇಕ ಎಲ್ಲ ಚಿಹ್ನೆಗಳು ದೂರವಾಗಿದ್ದವು.

ಈ ಮೇಲ್ಕಂಡ ಪ್ರಕರಣದಲ್ಲಿ ಹಾಗೂ ಇದೇ ಬಗೆಯ ಇತರ ಅನೇಕ ಪ್ರಕರಣಗಳಲ್ಲಿ, ಚಿಕಿತ್ಸೆಯ ಅವಧಿಯಲ್ಲಿ ತಾಯಿತಂದೆಯರೊಂದಿಗೆ ಸತತವಾಗಿ ಸಂದರ್ಶನ ಮಾಡಬೇಕು. ಏಕೆಂದರೆ ಕೆಲವು ಮಂದಿ ತಾಯ್ತಂದೆಯರು, ಅದರಲ್ಲೂ ಮುಖ್ಯವಾಗಿ ತಾಯಿಯರು ತಮ್ಮ ಅತಿಭಾವುಕತೆಯಿಂದಾಗಿ ತಮ್ಮ ಮಕ್ಕಳು ಹೆಚ್ಚು ಸ್ವತಂತ್ರರಾಗಿರುವುದನ್ನು ಇಷ್ಟಪಡುವುದಿಲ್ಲ. ಇದರಿಂದ ಮಕ್ಕಳಲ್ಲಿ ಅಪ್ರಬುದ್ಧತೆ ಉಂಟಾಗಿ ತಾಯಿಯಿಂದ ದೂರ ಹೋಗಲು ನಿರಾಕರಿಸುವುದು, ಶಾಲೆಗೆ ಒಬ್ಬನೇ ಹೋಗಲು ಹಾಗೂ ತನ್ನ ಸಮಾನಸ್ಕಂಧರಾದ ಇತರರೊಂದಿಗೆ ಸ್ನೇಹಮಾಡಿಕೊಳ್ಳಲು ನಿರಾಕರಿಸುವುದು, ಅಂಜುಬುರುಕುತನ, ಹಾಸಿಗೆ ಒದ್ದೆಮಾಡಿಕೊಳ್ಳುವುದು, ಬೆರಳು ಚೀಪುವುದು, ಉಗುರು ಕಚ್ಚುವುದು, ಮಕ್ಕಳಂತೆ ಮಾಡುವುದು, ಉಗ್ಗುವುದು, ತೊದಲುವುದು, ಅನಗತ್ಯ ನಾಚಿಕೆ ಸ್ವಭಾವ ಮುಂತಾದ ಸಮಸ್ಯೆಗಳು ತಲೆದೋರುವುವು. ಅನಂತರ ಅದೇ ತಾಯಿತಂದೆಯರು ತಮ್ಮ ಮಕ್ಕಳು ತಮಗೆ ವಿಪರೀತವಾಗಿ ಅಂಟಿಕೊಂಡಿರುವರೆಂದು ಭಾವಿಸಲಾರಂಭಿಸುವದು! ತಮ್ಮ ಮಕ್ಕಳು ತಮ್ಮಿಂದಲೇ ಸೃಷ್ಟಿಯಾದ ಪರಿಸರ ಬಲಿ ಪಶುಗಳಾಗಿರುವರೆಂಬುದನ್ನು ಅವರು ಅರ್ಥ ಮಾಡಿಕೊಳ್ಳುವುದಿಲ್ಲ. ಅವರು ಅಂಥ ಪರಿಸರವನ್ನು ಆಮೂಲಾಗ್ರವಾಗಿ ಬದಲಾಯಿಸಬೇಕು.

ಒಂದು ಮಗು ಹಲವಾರು ಬಗೆಯ ರೋಗದ ಚಿಹ್ನೆಗಳನ್ನು ವ್ಯಕ್ತಪಡಿಸಿದರೆ ಹಾಗೂ ಸಾಮಾನ್ಯ ರೀತಿಯ ಮಾರ್ಗದರ್ಶನಕ್ಕೆ ಸ್ಪಂದಿಸಿದಿದ್ದರೆ ಇವು ನರವ್ಯಾಧಿ (ನ್ಯುರೋಸಿಸ್) ಯ ಪ್ರಾರಂಭದ ಚಿಹ್ನೆಗಳೇ ಎಂಬ ಬಗೆಗೆ ಎಚ್ಚರಿಕೆಯಿಂದ ಆಲೋಚಿಸಬೇಕು. ಅನೇಕ ಸಂದರ್ಭಗಳಲ್ಲಿ ಕಾಲ ಸಂದಂತೆ ಅದೇ ಸರಿಹೋಗುತ್ತದೆ ಎಂದು ಉಪೇಕ್ಷಿಸಲಾಗುತ್ತದೆ. ಅದು ಸಾಧ್ಯವಿರುವುದಾದರೂ ನ್ಯೂರೋಸಿಸ್ ಚಿಕ್ಕವಯಸ್ಸಿನಲ್ಲೇ ಕಾಣಿಸಿಕೊಳ್ಳಲಾರಂಭಿಸುತ್ತದೆ. ಅಪಾಯದ ಚಿಹ್ನೆಗಳನ್ನು ಮುಂಚಿತವಾಗಿಯೇ ಗುರುತಿಸಿ ಮುಂದೆ ಪರಿಸ್ಥಿತಿ ಹದಗೆಡುವುದನ್ನು ತಡೆಗಟ್ಟಲು ಪ್ರಯತ್ನಿಸುವುದು ಒಳ್ಳೆಯದು.

ಮುಂದಿನ ಲೇಖನದಲ್ಲಿ ಉಗ್ಗುವುದರ ಬಗ್ಗೆ ಇನ್ನೂ ಹೆಚ್ಚಿನ ವಿವರಗಳನ್ನು ತಿಳಿದು ಕೊಳ್ಳಬಹುದು.

# ಸುತ್ತಮುತ್ತ

### ಮುಂಬಯಿ ಕನ್ನಡ ಸಂಘದ ಆಶ್ರಯದಲ್ಲಿ ಸಂಭ್ರಮದ ಶ್ರೀಗಣೇಶೋತ್ಸವ

ಮುಂಬಯಿ ಕನ್ನಡ ಸಂಘದ, ಮಾಟುಂಗ ಇದರ ಆಶ್ರಯದಲ್ಲಿ ಪ್ರತಿ ವರ್ಷದಂತೆಯೂ ಈ ವರ್ಷವೂ ಶ್ರೀ ಗಣೇಶೋತ್ಸವವನ್ನು ಆಚರಿಸಲಾಯಿತು. ದಿನಾಂಕ 6-9-97ರಿಂದ 8-9-97ರ ತನಕ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಆಚರಿಸಲಾಯಿತು. 6-9-97ರಂದು ಬೆಳಿಗ್ಗೆ 9-00ಕ್ಕೆ ವಿಗ್ರಹ ಪ್ರತಿಷ್ಠಾಪನೆ, ಸಂಜೆ 6-00ಕ್ಕೆ ಪಂಡಿತ ಶ್ರೀ ರಾಘವೇಂದ್ರಾಚಾರ್ಯ ಸಾಂಗ್ಲಿಯವರಿಂದ ಪ್ರವಚನ ವೇದಘೋಷ, ಪೂಜೆ ನಡೆಯಿತು.

7-9-97ರಂದು ಡೊಂಬಿವಲಿಯ ಸರಸ್ವತಿ ಭಜನಾ ಮಂಡಳಿಯ ಸದಸ್ಯೆಯರಿಂದ ಭಕ್ತಿ ಸಂಗೀತ ಕಾರ್ಯಕ್ರಮ ನಡೆಯಿತು. 8-9-97ರಂದು ಡೊಂಬಿವಿಲಿಯ ಮೈಸೂರು ಸಂಗೀತ ವಿದ್ಯಾಲಯ ವಿದ್ಯಾರ್ಥಿನಿಯರಿಂದ ಭಕ್ತಿ ಸಂಗೀತ, ಕರ್ನಾಟಕ ಸಂಗೀತ ಕಚೇರಿ ನಡೆಯಿತು. ಈ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಬಾಬಾ ಅಣುಶಕ್ತಿ ಕೇಂದ್ರದ (ಬಿ ಎ ಆರ್ ಸಿ ) ನಿವೃತ್ತ ವಿಜ್ಞಾನಿ ಶ್ರೀ ಕೆ. ಎನ್. ಕೀರ್ತಿ ಆಗಮಿಸಿದ್ದರು. ಇವರು ಮೈಸೂರು ಸಂಗೀತ ವಿದ್ಯಾಲಯದ ವಿದ್ಯಾರ್ಥಿನಿಯರಿಗೆ ಯಶಸ್ಸು ಕೋರಿ ಹರಸಿದರು. ಕಲಾವಿದರಿಗೆ ಪುಷ್ಪ ಗುಚ್ಛ ಕೊಟ್ಟು ಸತ್ಕರಿಸಿದರು. ಪ್ರಿನ್ಸಿಪಾಲ್ ಉಮಾ ನಾಗಭೂಷಣರ ಪರವಾಗಿ ಕುಮಾರಿ ಗಾಯತ್ರಿ ಪುಷ್ಪ ಗುಚ್ಛ ಸ್ವೀಕರಿಸಿದರು. ಮೃದಂಗ ವಾದಕರಾಗಿ ಶ್ರೀ ರಾಧಕೃಷ್ಣನ್, ಪಿಟೀಲು ವಾದಕರಾಗಿ ಶ್ರೀಮತಿ ಪಾರ್ವತಿಶಂಕರ್ ಸಹಕರಿಸಿದ್ದರು. ನಂತರ ಅತೀ ಹೆಚ್ಚು ಉದಾರ ಕಾಣಿಕೆ ಸಂಗ್ರಹಿಸಿದ ಶ್ರೀ ಜಿ. ಎನ್. ನಾಯಕ್, ಶ್ರೀ ಜಿ. ಡಿ. ಪೈ, ಶ್ರೀ ಶೇಖರ ಕಾಂಚನ್, ಶ್ರೀ ಬಿ. ಕೆ. ಹರ್ಷಾಚಾರ್ಯ ಇವರಿಗೆ ಸ್ಮರಣಿಕೆಯನ್ನು ಶ್ರೀ ಕೆ. ಎನ್. ಕೀರ್ತಿಯವರು ಕೊಟ್ಟು ಯಶಸ್ಸು ಕೋರಿದರು. ಮುಂಬಯಿ ಹೋಟೇಲು ಉದ್ಯಮಿ ಶ್ರೀ ವಿಶ್ವನಾಥ ಶೆಟ್ಟರು ಗೌರವ ಅತಿಥಿಯಾಗಿ ಆಗಮಿಸಿ ವಜ್ರಮಹೋತ್ಸವ ಆಚರಣಾ ನಿಧಿಗೆ ಅದಷ್ಟು ಹೆಚ್ಚು ಧನಸಹಾಯ ಮಾಡುವ ಬಗ್ಗೆ ಆಶ್ವಾಸನೆ ಇತ್ತರು. ಅವರನ್ನು ವೈದಿಕರು ಹಣ್ಣುಕಾಯಿ, ಫಲಪುಷ್ಪ ಕೊಟ್ಟು ಆಶೀರ್ವದಿಸಿದರು. ಅದೇ ರೀತಿ ಗಣಪತಿ ವಿಗ್ರಹದ ಖರ್ಚನ್ನು ಕೊಟ್ಟು ಸಹಕರಿಸಿದ ಶ್ರೀ ಎಸ್. ವಿ. ಮೋಹನ್, ಶ್ರೀಮತಿ ಮೋಹಿನಿ ಬಿ. ರಾವ್, ಶ್ರೀ ಬಿ. ಡಿ. ದಿನೇಶ್ ಇವರಿಗೂ ಹಾಗೂ ಮಹಾ ಪ್ರಸಾದದ ಖರ್ಚು ಕೊಟ್ಟು ಸಹಕರಿಸಿದ ಶ್ರೀಮತಿ ಎಚ್. ಕೆ. ರಮಾದೇವಿ, ಶ್ರೀಮತಿ ವಿ. ಸಿ. ಮಂದಾಕಿನಿ, ಶ್ರೀಮತಿ ಆಶಾ ವಿ. ಕಾಮತ್ ಇವರಿಗೂ ಫಲಪುಷ್ಪ ಕೊಟ್ಟು ಸತ್ಕರಿಸಲಾಯಿತು. ಸಂಘದ ಉಪಾಧ್ಯಕ್ಷರಾದ ಡಾ. ಜಿ. ಡಿ. ಜೋಶಿಯವರು ಸಂಘದ ವಜ್ರಮಹೋತ್ಸವ ಸಮಾರೋಪ ಸಮಾರಂಭವಾಗಿ (1-11-97ರಂದು)ದ ವಿವರ ನೀಡಿ ಸದಸ್ಯರ ಸಹಕಾರ ಕೋರಿದರು. ಅದೇ ರೀತಿ ವಜ್ರಮಹೋತ್ಸವ ಸಮಾರಂಭ ಸಮಯದಲ್ಲಿ ಬಿಡುಗಡೆಗೊಳಿಸುವ ಸ್ಮರಣ ಸಂಚಿಕೆಯ ಯಶಸ್ಸಿಗೆ ನಿಧಿ ಸಂಗ್ರಹಕ್ಕೆ ಪೂರ್ಣ ಸಹಕಾರ ಕೊಡಬೇಕಾಗಿ ಸ್ಮರಣ ಸಂಚಿಕೆಯ ಸಂಚಾಲಕರಾದ ಶ್ರೀ ಎನ್. ಪಿ. ಸುವರ್ಣ ಮನವಿ ಮಾಡಿಕೊಂಡರು. ಶ್ರೀ ಗಣೇಶೋತ್ಸವ ಆಚರಣೆಯ ನಿರ್ವಹಕರಾಗಿ ಶ್ರೀ ಜಿ. ಎಸ್. ನಾಯಕ್, ಶ್ರೀ ಜಿ. ಡಿ. ಪೈ ಕಾರ್ಯ ನಿರ್ವಹಿಸಿದರು.

ಸಂಘದ ಗೌ। ಕೋಶಾಧಿಕಾರಿ ಶ್ರೀ ಜಿ. ಎಸ್. ನಾಯಕರು ವಂದನಾರ್ಪಣೆ ಮಾಡಿದರು. ಶ್ರೀ ಪಂಡಿತ ರಾಘವೇಂದ್ರಾಚಾರ್ಯ ಸಾಂಗ್ಲಿ, ವೇದಮೂರ್ತಿ ಅಚ್ಯುತ ಭಟ್ ಮತ್ತು ನರಸಿಂಹ ಭಟ್ ಇವರಿಂದ ವೇದ ಘೋಷ ನಡೆಸಿ ಮಹಾಮಂಗಳಾರತಿ ಮಾಡಿ ಮೂರ್ತಿಯನ್ನು ಶಿವಾಜಿ ಪಾರ್ಕಿನ ಸಮುದ್ರ ತೀರದಲ್ಲಿ ವಿಸರ್ಜಿಸಲಾಯಿತು. ನಂತರ ಎಲ್ಲರಿಗೂ ಪ್ರಸಾದ ವಿನಿಯೋಗ ನಡೆಯಿತು.

### ಮುಂಬಯಿ ಕನ್ನಡ ಸಂಘ, ಮಾಟುಂಗ

ಇದರ 57ನೇ ವಾರ್ಷಿಕ ಮಹಾಸಭೆಯು 20-9-97 ರಂದು ಡಾ. ಜಿ. ಡಿ. ಜೋಶಿಯವರ ಅಧ್ಯಕ್ಷತೆಯಲ್ಲಿ ಜರಗಿತು. 1997-98, 98-99ನೇ ವರ್ಷದ ಕಾರ್ಯಕಾರಿ ಸಮಿತಿ ಆಯ್ಕೆಯನ್ನು ನಡೆಸಲಾಯಿತು. ಶ್ರೀ ಜಿ. ವಿ. ರಂಗಸ್ವಾಮಿಯವರು ಸಂಘದ ಗೌರವ ಮಹಾಪೋಷಕರಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷರಾಗಿ ಡಾ. ಜಿ. ಡಿ. ಜೋಶಿ, ಉಪಾಧ್ಯಕ್ಷರಾಗಿ ಶ್ರೀ ಎಸ್. ವಿ. ಮೋಹನ್ ಮತ್ತು ಶ್ರೀ ಎನ್. ಪಿ. ಸುವರ್ಣ ಗೌರವ ಪ್ರಧಾನ ಕಾರ್ಯದರ್ಶಿಯಾಗಿ ಶ್ರೀ ಗುರುರಾಜ ಎಸ್. ನಾಯಕ್, ಜೊತೆ ಕಾರ್ಯದರ್ಶಿಯಾಗಿ ಶ್ರೀ ಪುರುಷೋತ್ತಮ ವಿ. ಎಸ್., ಗೌರವ ಕೋಶಾಧಿಕಾರಿ ಶ್ರೀ ಜಿ. ಡಿ. ಪೈ, ಗ್ರಂಥ ಭಂಡಾರದ ಅಧಿಕಾರಿಯಾಗಿ ಶ್ರೀಮತಿ ಸುಗುಣ ಶೆಟ್ಟಿ, ಕಾರ್ಯಕಾರಿ ಸಮಿತಿಯ

ಸದಸ್ಯರಾಗಿ ಡಾ. ಟಿ. ವಿ. ನಾಯಕ್, ಶ್ರೀ ಚಂದ್ರಶೇಖರ ರಾವ್, ಶ್ರೀ ಸಿ. ಶಂಕರನಾರಾಯಣ ರಾವ್, ಶ್ರೀ ಬಿ. ನಾಗಭೂ ಶ್ರೀ ಜಿ. ಡಿ. ರೊಡ್ರಿಗ್ಸ್, ಶ್ರೀ ಬಿ. ಕೆ. ಹರ್ಷಾಚಾರ್ಯ, ಶ್ರೀಮತಿ ಮೀರಾ ಆರ್. ರಾವ್, ಶ್ರೀಮತಿ ಲಕ್ಷ್ಮಿ ಎಸ್. ರಾವ್, ಶ್ರೀ ದಿವಾಕರ ಎಂ. ಪೈ, ಶ್ರೀಮತಿ ಮೋಹಿನಿ ಬಿ. ರಾವ್, ಶ್ರೀಮತಿ ಪ್ರಭಾ ಸುವರ್ಣ, ವಜ್ರಮಹೋತ್ಸವ ಆಚರಣಾ ಸಮಿತಿಯ ಅಧ್ಯಕ್ಷರಾದ ಪ್ರಾ. ಸೀತಾರಾಮ ಆರ್. ಶೆಟ್ಟಿಯವರು ವಿಶೇಷ ಆಹ್ವಾನಿತರಾಗಿ ಆಯ್ಕೆಯಾಗಿದ್ದಾರೆ.

ಲೆಕ್ಕ ಪರಿಶೋಧಕರಾಗಿ ಮೆ. ಎಂ. ಎಂ. ಶೆಟ್ಟಿ ಮತ್ತು ಕಂ., ಆಯ್ಕೆಯಾಗಿದ್ದಾರೆ. ಶ್ರೀ ಶೇಖರ ಕಾಂಚನ್ ಗ್ರಂಥಪಾಲಕರಾಗಿ ಕಾರ್ಯ ನಿರ್ವಹಿಸುತ್ತಿರುವರು.

ಸಂಘವು 60 ವರ್ಷಗಳನ್ನು ಕಳೆದು 61ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದ 1997ನೇ ವರ್ಷದಲ್ಲಿ ಸಂಘದ ವಜ್ರಮಹೋತ್ಸವವನ್ನು ವಿವಿಧ ಸಾಂಸ್ಕೃತಿಕ, ಧಾರ್ಮಿಕ ಹಾಗು ಸಾಹಿತ್ಯಕ ಕಾರ್ಯಕ್ರಮಗಳೊಂದಿಗೆ ಈಗಾಗಲೇ ಆಚರಿಸಲಾಗಿದೆ. 01-11-97ರಂದು ಸಂಘದ ವಜ್ರಮಹೋತ್ಸವದ ಸಮಾರೋಪ ಸಮಾರಂಭವನ್ನು ಕರ್ನಾಟಕ ಸಂಘದ ಡಾ. ವಿಶ್ವೇಶ್ವರಯ್ಯ ಸಭಾಗೃಹದಲ್ಲಿ ನಡೆಸಲು ನಿರ್ಧರಿಸಲಾಗಿದೆ. ಈ ಸಮಯದಲ್ಲಿ ಗಣ್ಯ ವ್ಯಕ್ತಿಗಳನ್ನು ಸನ್ಮಾನಿಸಲು ಸಂಘವು ನಿರ್ಧರಿಸಿದೆ. ಇದರೊಂದಿಗೆ ಮನೋರಂಜನಾ ಕಾರ್ಯಕ್ರಮಗಳನ್ನು ನಡೆಸಲಾಗುವುದು.

ಮುಂಬಯಿಯ ಕನ್ನಡ ಸಂಘವು ಕಳೆದ 61ವರ್ಷಗಳಿಂದ ಕನ್ನಡಿಗರ ಸೇವೆ ಸಲ್ಲಿಸುತ್ತಿದ್ದು, ಪ್ರತಿವರ್ಷವೂ ಶ್ರೀ ಗಣೇಶೋತ್ಸವ, ನಾಡ ಹಬ್ಬ, ಕವಿಗೋಷ್ಠಿ, ಶ್ರೀ ಪುರಂದರದಾಸರ ಆರಾಧನೆ ಇತ್ಯಾದಿ ಕಾರ್ಯಕ್ರಮಗಳನ್ನು ನಡೆಸುತ್ತ ಬಂದಿದೆ. ಸಂಘವು ನಡೆಸುವ ಉಚಿತ ವಾಚನಾಲಯ ಮತ್ತು ಗ್ರಂಥಾಲಯವು ಮುಂಬಯಿ ನಗರದಲ್ಲಿ ಅತೀ ಉತ್ತಮವಾಗಿದ್ದು ಗ್ರಂಥಾಲಯದಲ್ಲಿ ಸುಮಾರು 11,000ಕ್ಕೂ ಹೆಚ್ಚು ಪುಸ್ತಕಗಳಿವೆ. ಮುಂಬಯಿ ಕನ್ನಡಿಗರು ಸಂಘದ ವಜ್ರಮಹೋತ್ಸವ ಸಮಾರೋಪ ಕಾರ್ಯಕ್ರಮಕ್ಕೆ ತನು-ಮನ-ಧನಗಳಿಂದ ಸಹಕರಿಸಬೇಕೆಂದು ಸಂಘದ ಪ್ರಕಟನೆ ಮೂಲಕ ವಿನಂತಿಸಲಾಗಿದೆ.

# ಅಖಿಲ ಭಾರತ ೬೪ನೇ ಕನ್ನಡ ಸಮ್ಮೇಳನ

"ಉಳ್ಳಾಲ ಅಬ್ಬಕ್ಕ ರಾಣಿ ನಗರ" ಮಂಗಳೂರು-೧೯೯೭

## ವಿಜ್ಞಾಪನಾ ಪತ್ರ

ಸಹೃದಯ ಕನ್ನಡ ಬಾಂಧವರೇ,

ಕರ್ನಾಟಕ ಸಾಹಿತ್ಯಿಕ, ಸಾಂಸ್ಕೃತಿಕ, ನಕಾಶೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ವಿಶಿಷ್ಟವಾದ ಒಂದು ಸ್ಥಾನವಿದೆ. ಈ ಜಿಲ್ಲೆಯ ಇತಿಹಾಸದ ಉದ್ದಕ್ಕೂ ನಾಡುನುಡಿಗೆ ತನ್ನದೇ ಆದ ಗಣನೀಯ ಕಾಣಿಕೆಗಳನ್ನು ಸಲ್ಲಿಸಿದೆ. ಸ್ವಾತಂತ್ರ್ಯ ಹೋರಾಟಗಾರರ ನೆಲೆಯಲ್ಲಿ ರಾಣಿ ಅಬ್ಬಕ್ಕಳಿಂದ ತೊಡಗಿ ಕಾರ್ನಾಡು ಸದಾಶಿವ ರಾಯರಿಗೆ ಅನೇಕ ಪ್ರಾತಃ ಸ್ಮರಣೀಯರು ಆಗಿ ಹೋಗಿದ್ದಾರೆ. ಈ ಜಿಲ್ಲೆಯ ಕೀರ್ತನೆಗಾರರು, ಕವಿಗಳು, ಕಲಾವಿದರು, ಸಮಗ್ರ ರಾಜ್ಯ ಕನ್ನಡ ಭಾಷೆಗೆ ನೀಡಿದ ಕೊಡುಗೆ ಕಿರಿದೇನಲ್ಲ. ಇಬ್ಬರು ಜ್ಞಾನಪೀಠ ಪ್ರಶಸ್ತಿ ಪಡೆದ ರಾಷ್ಟ್ರಮಟ್ಟದ ಉದ್ದಾಮ ಸಾಹಿತಿಗಳ ನೆಲೆವೀಡು ದಕ್ಷಿಣಕನ್ನಡ. ಈ ಜಿಲ್ಲೆಯ ಸಾಹಿತ್ಯಿಕ, ಸಾಂಸ್ಕೃತಿಕ, ಧಾರ್ಮಿಕ ಮತ್ತು ಆರ್ಥಿಕ ರಂಗಗಳಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ತನ್ನದೇ ಛಾಪು - ಕಂಪನ್ನು ಉಳಿಸಿಕೊಂಡು ಬಂದಿರುವುದು ಗಮನೀಯ ವಿಚಾರ.

ಪ್ರಸ್ತುತದ ದಕ್ಷಿಣ ಕನ್ನಡ ಜಿಲ್ಲೆಯ ಸಾಹಿತ್ಯಿಕ ಪರಮೋನ್ನತಿಯನ್ನು ಪರಿಗಣಿಸಿ ಕನ್ನಡ ಸಾಹಿತ್ಯ ಪರಿಷತ್ತು ಈ ವರ್ಷ ಅಖಿಲ ಭಾರತ ೬೪ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಜರಗಿಸುಸಲು ಜಿಲ್ಲೆಯ ಕೇಂದ್ರ ಸ್ಥಾನವಾದ ಮಂಗಳೂರನ್ನು ಆರಿಸುವುದು ಜಿಲ್ಲೆಯ ಸರ್ವರೂ ಹೆಮ್ಮೆ ಪಡಬೇಕಾದ ವಿಚಾರ. ಸಾಹಿತ್ಯ ಪರಿಷತ್ ನೀಡಿದ ಹೊಣೆಯನ್ನು ಸ್ವೀಕರಿಸಿ ಇದೀಗ ಅಖಿಲಭಾರತ ಮಟ್ಟದ ೬೪ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮಂಗಳೂರಿನಲ್ಲಿ ನೆರವೇರಿಸಲು ಸನ್ನದ್ಧರಾಗಿದ್ದೇವೆ.

ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ। ಡಿ. ವೀರೇಂದ್ರ ಹೆಗ್ಗಡೆಯವರು ಗೌರವಾಧ್ಯಕ್ಷರಾಗಿ, ಜಿಲ್ಲೆಯ ಉಸ್ತುವಾರಿ ಸಚಿವರಾದ ಶ್ರೀ ಬಿ. ಎ. ಮೊಯಿದ್ದೀನ್‌ರವರು ಸ್ವಾಗತಾಧ್ಯಕ್ಷರಾಗಿ, ಹಿರಿಯ ರಾಜಕಾರಣಿ ಮಾಜಿ ಸಚಿವ, ಶಾಸಕ ಶ್ರೀ ಕೆ. ಅಮರನಾಥ ಶೆಟ್ಟಿಯವರು ಕಾರ್ಯಾಧ್ಯಕ್ಷರಾಗಿ, ಸನ್ಮಾನ್ಯ ಜಿಲ್ಲಾಧಿಕಾರಿಗಳಾದ ಶ್ರೀ ಬಿ. ಎಚ್. ಅನಿಲ್‌ಕುಮಾರ್ ಅವರು ಸಂಚಾಲಕ ಮತ್ತು ಕೋಶಾಧ್ಯಕ್ಷರಾಗಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಧರ್ಮದರ್ಶಿ ಶ್ರೀ ಹರಿಕೃಷ್ಣ ಪುನರೂರು ಇವರು ಪ್ರಧಾನ ಕಾರ್ಯದರ್ಶಿಯಾಗಿ ಮತ್ತು ಜಿಲ್ಲೆಯ ಉದ್ದಗಲದ ಸಾಹಿತ್ಯಿಕ - ಸಾಮಾಜಿಕ ಮುಖಂಡರನ್ನೊಳಗೊಂಡ ಸ್ವಾಗತ ಸಮಿತಿ - ಉಪಸಮಿತಿಗಳನ್ನು ಈಗಾಗಲೇ ರಚಿಸಲಾಗಿ.

ಈ ಸಮ್ಮೇಳನವು ೧೯೯೭ರ ದಸಂಬರ ತಿಂಗಳ ಎರಡನೇ ವಾರದಲ್ಲಿ 11, 12, 13 ಮತ್ತು 14ರಂದು ಮಂಗಳೂರಿನ "ಮಂಗಳಾ ಕ್ರೀಡಾಂಗಣ"ದಲ್ಲಿ ಜರಗಲಿದ್ದು, ಸುಮಾರು ಹತ್ತು ಸಾವಿರದಷ್ಟು ಪ್ರತಿನಿಧಿಗಳ ಸಹಿತ ಐವತ್ತು ಸಾವಿರಕ್ಕೂ ಮಿಕ್ಕಿ ಕನ್ನಡಾಭಿಮಾನಿಗಳು ಭಾಗವಹಿಸುವ ನಿರೀಕ್ಷೆಯಿದೆ. ಪ್ರತಿನಿಧಿ ಶುಲ್ಕ ರೂ. 100/- ದಿನನಿತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳು, ಅಲ್ಲದೆ ಕನ್ನಡ ಭಾಷೆಗೆ ರಾಷ್ಟ್ರೀಯ ಮೌಲ್ಯ ಒದಗಿಸುವಂತಹ ವಿಶಿಷ್ಟವಾದ ಗೋಷ್ಠಿಗಳನ್ನು ಹಮ್ಮಿಕೊಳ್ಳಲಾಗಿದೆ. ರಾಜ್ಯದ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುವ "ಮಾತೆ ಭುವನೇಶ್ವರಿಯ" ಭವ್ಯ ಮೆರವಣಿಗೆಯನ್ನು ಸಮ್ಮೇಳನದಲ್ಲಿ ಅಳವಡಿಸಲಾಗಿದೆ.

ಈ ಬೃಹತ್ ಸಮ್ಮೇಳನಕ್ಕೆ ಸುಮಾರು ಐವತ್ತು ಲಕ್ಷಕ್ಕೂ ಅಧಿಕವಾದ ಅಂದಾಜು ಆಯ-ವ್ಯಯ ಪಟ್ಟಿಯನ್ನು ರೂಪಿಸಲಾಗಿದ್ದು ಜಿಲ್ಲೆಯ ಮತ್ತು ರಾಜ್ಯದ ಕನ್ನಡಾಭಿಮಾನಿ ಕೊಡುಗೈ ದಾನಿಗಳ ತ್ರಿಕರಣ ಪೂರ್ವಕ ನೆರವು, ಪ್ರೋತ್ಸಾಹ, ಬೆಂಬಲಗಳನ್ನು ಈ ಮೂಲಕ ಹೃತ್ಪೂರ್ವಕವಾಗಿ ಅಪೇಕ್ಷಿಸುತ್ತೇವೆ.

ಇತೀ ಕನ್ನಡದ ಕಾಯಕದಲ್ಲಿ ತಮ್ಮವರು :

| | | |
|---|---|---|
| ಕೆ. ಅಮರನಾಥ ಶೆಟ್ಟಿ, ಶಾಸಕರು<br>ಕಾರ್ಯಾಧ್ಯಕ್ಷರು | ಬಿ. ಎ. ಮೊಯಿದ್ದೀನ್<br>ಸಚಿವರು, ಸ್ವಾಗತಾಧ್ಯಕ್ಷರು | ಡಾ। ಡಿ. ವೀರೇಂದ್ರ ಹೆಗ್ಗಡೆ<br>ಗೌರವಾಧ್ಯಕ್ಷರು |
| ಡಾ। ಸಾ. ಶಿ. ಮರುಳಯ್ಯ<br>ಅಧ್ಯಕ್ಷರು<br>ಕ.ಸಾ.ಪ. ಬೆಂಗಳೂರು | ಬಿ. ಎಚ್. ಅನಿಲ್‌ಕುಮಾರ್<br>ಜಿಲ್ಲಾಧಿಕಾರಿಗಳು<br>ಕೋಶಾಧ್ಯಕ್ಷರು<br>ಕ.ಸಾ.ಪ. ಜಿಲ್ಲಾಧ್ಯಕ್ಷರು | ಧರ್ಮದರ್ಶಿ ಹರಿಕೃಷ್ಣ ಪುನರೂರು<br>ಪ್ರಧಾನ ಕಾರ್ಯದರ್ಶಿ |

ಮತ್ತು ಸ್ವಾಗತ ಸಮಿತಿ ಸರ್ವ ಸದಸ್ಯರು

"ಬಂಗನ್ನಡಂ ಗೆಲ್ಗೆ"

ಮುಂಬಯಿಯಲ್ಲಿ ಸಂಪರ್ಕ : ಕನ್ನಡ ಸಾಹಿತ್ಯ ಪರಿಷತ್ತಿನ ಮಹಾರಾಷ್ಟ್ರ ಘಟಕದ ಅಧ್ಯಕ್ಷ/ಕಾರ್ಯದರ್ಶಿ

ಫೋನ್ : 523 12 60/578 3061

Regn. No. 040015/86
Regn. No. MH/by/NE121/95

# USHA JAIRAM



Usha Jairam, one of our senior members. Passed away on 21-10-97 after a brief illness she was 61.

Usha joined the Mysore Association in 1963 and actively participated in the cultural activities along with her aunt Bhavani Sunder Raj and her sister Sudha Acharya. From the year 1975 - she was elected into the Managing Committee in 1975 and has since been its member for the last 22 years she was the guiding force for the resurgence of the cultural activities in the Association. She was one of the chief organisers during the Golden Jubilee of the Association in the year 1976 and also its Diamond Jubilee in 1986. She was the prime force behind not only the participation of ladies in the activities of the Association in greater numbers, but also the founder member of various women's organisations in the city. She was the founder member of Sion Wadala Kurla Chembur Mahila Mandali, a chapter of All India Women's Conference Bombay Branch and Kannada Vanitha Samaja. She was also actively connected with Kannada Kala Kendra since 1978 and the National Kannada Education Society since 1990. She was currently the President of N.K.E.S.

Usha's main forte was to organise people and bring them to the fore and keep herself in the back ground. That she was the member and Vice President of Karnataka Sangha, Bombay during its formative years is well known. The first ever Women's literary conference in Bombay was so successfully organised by Usha that it gave an impetus to many kannada women writers in the city. She was the Secretary of the All India Women's Conference, Bombay Branch for the past 10 years and was the chosen delegate of the AIWC Bombay branch to various conferences of AIWC.

Social reformation to Usha was not restricted to Kannada community and found no barriers. She strived for literacy programme among the underprivileged and was conducting for many years adult literacy classes in Dharavi. In the riot torn years of 1992-93, without fear, she went to the fearsome areas of Bombay to bring succour to the injured and deprived. Few know that she was actively associated with the A.I.W.C.'s relief work for the earthquake shattered people of Latur in Maharashtra. Her latest love for the past one and a half years was educating the children living in the streets of Khar area. Most of her awakened time was devoted to the constructive social reformation in the city.

Usha today is remembered as a social reformer, but she was a multifaceted personality. She was a well known actress on the kannada stage of Bombay for the last 22 years. 'Rangoli Nyaya', 'Bekkina Kannu ', 'Padma Shri DhundiRaj', 'Nishe Aliye Ushe Yelli', 'Belli Bailu', 'Koopa Mandooka', 'Meenakshi Mane Meshtru', and 'Bonu' were among the few which can be mentioned.

That Usha was a poet was known to very few. A very shy person who abhorred publicity, she never ventured to publish any thing of her own. These were reserved to the closest friends and family.

That Usha was a very good singer was known to very few. She underplayed her own personality to the cause she worked for. For her, the song was more important than the singer.

Above all, Usha was synonymous with love and giving to one and all. She brought many organisations together, who would not have otherwise found each other. That Mysore Association and AIWC's bear such close relationship today is solely due to Usha's efforts for a number of years. Similarly, she made many of the members of Association to contribute to the cause of the underprivileged, through the activities of the other organisations.

Even on the day she was afflicted by this terrible disease, she was working till 1 p.m. in the afternoon with the street children, whom she loved so much. There is not a single soul amongst us who has not savoured the hospitality of Usha. In the Association, she was rightly known as 'Annapoornamma'. Usha was , as she was aptly named by her mother, was the golden glow heralding the arrival of love, affection and inspiration to work for others.

It is an irrepairable loss not only to her family, her near and dear ones, but also to a large section of mankind. On behalf of the members of Mysore Association, "Nesaru" wishes to convey its deepest sympathies to her family members. She leaves behind her husband Shri. K.R.N. Jairam, daughter Saritha, mother Bharathibai, sisters Sudha, Rekha, Geetha, brother Jagdish and scores colleagues, friends and admirers.

This is a loss which will take all of us many many yeas to fill. But her goals, ideals and above all her affection should be a guiding beacon to all of us in our future endeavours.

Edited, Printed & Published by M.A.N. Prasad, On behalf of the Mysore Association, Mumbai. Tel.: 402 46 47
Printed at Aarati Art Printers, Fort, Mumbai-400 001. * 266 33 61 / 266 59 38